# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

70,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ:09 • ನೋಂದಣಿ ನಂ.:KARKAN27911 • ವಿಜಯನಗರ • 30.06.2024 • ಭಾನುವಾರ • ಪುಟ:04 • ಬೆಲೆ:2

Volume:02 • Issue:09 • Reg.No:KARKAN27911 • VIJAYANAGARA • 30.06.2024 • Sunday • Page:04 • Rs:2



SSLC ಹೈ ಸ್ಕೋರ್‌ಗೆ ಪ್ರಶ್ನೋತ್ತರ ಸರಣಿ

ಆರಂಭದಿಂದಲೇ ಅಭ್ಯಾಸ ಮಾಡಲು ನಿಮ್ಮೊಂದಿಗಿರಲಿದೆ ಹಂಪಿ ಟೈಮ್ಸ್

ಶೀಘ್ರದಲ್ಲೇ ... ನಿಮ್ಮ ಬೆರಳ ತುದಿಗೆ ನಿರೀಕ್ಷಿಸಿ...

Scan To Read


# ಜಿಲ್ಲೆಯಲ್ಲಿ ಕಳುವಾಗಿದ್ದ 1.78 ಕೋಟಿ ರೂ ಮೌಲ್ಯದ ವಸ್ತುಗಳನ್ನು ವಾರಸುದಾರರಿಗೆ ಒಪ್ಪಿಸಿದ ಪೋಲೀಸರು

## ವರ್ಷದಲ್ಲಿ 5.54 ಕೋಟಿ ರೂ ಮೌಲ್ಯದ ವಸ್ತುಗಳ ಕಳವು | 2.15 ಕೋಟಿ ರೂ ಮೌಲ್ಯದ ವಸ್ತುಗಳ ವಶ 254 ಕಳ್ಳತನ ಪ್ರಕರಣ ವರದಿ | 87 ಪ್ರಕರಣ ಪತ್ತೆ, 162 ಜನ ವಶ | ಮುಂದುವರೆದ ಪತ್ತೆ ಕಾರ್ಯ

### ವಿಜಯನಗರ ಎಸ್ಪಿ ಶ್ರೀಹರಿಬಾಬು ಬಿ.ಎಲ್. ಹೇಳಿಕೆ | ವಾರಸುದಾರರು ಖುಷ್! | ವಾರಸುದಾರರಿಂದ ಪೊಲೀಸರಿಗೆ ಧನ್ಯವಾದ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾದ್ಯಂತ ಜು.1 2023 ರಿಂದ ಒಂದು ವರ್ಷದ ಅವಧಿಯಲ್ಲಿ 254 ಸ್ವತ್ತಿನ ಪ್ರಕರಣಗು ವರದಿಯಾಗಿವೆ. 87 ಪ್ರಕರಣಗಳ ಆರೋಪಿಗಳಿಂದ ವಶಪಡಿಸಿಕೊಂಡ ಮೊತ್ತ 2,15,53,637 ರೂ ಪೈಕಿ 1,78,08,703 ರೂಗಳ ಮೌಲ್ಯದ ವಸ್ತುಗಳನ್ನು ವಾರಸುದಾರರಿಗೆ ಹಿಂತಿರುಗಿಸಲಾಗಿದೆ. ಇನ್ನುಳಿದ 37,44,934 ಮೌಲ್ಯದ ವಸ್ತುಗಳನ್ನು ನ್ಯಾಯಾಲಯದ ಆದೇಶದ ಪಡೆದು ಹಿಂದಿರುಗಿಸಲಾಗುವುದು ಎಂದು ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ತಿಳಿಸಿದರು.






ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಶನಿವಾರ ಸಂಜೆ ಚಿನ್ನ, ಬೆಳ್ಳಿ, ವಸ್ತುಗಳನ್ನು ಕಳೆದುಕೊಂಡ ವಾರಸುದಾರರಿಗೆ ವಸ್ತುಗಳನ್ನು ಹಿಂದುರಿಗಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಒಂದು ವರ್ಷದಲ್ಲಿ 182 ಸಾಮಾನ್ಯ ಕಳ್ಳತನ, 58 ರಾತ್ರಿ ಕನ್ನಾ ಕಳವು, 7 ಹಗಲು ಕಳ್ಳತನ, 3 ಸರಕಳ್ಳತನ, 4 ರಾಬರಿ ಪ್ರಕರಣಗಳು ವರದಿಯಾಗಿದ್ದು, ಅವುಗಳ ಪೈಕಿ 87 ಪ್ರಕರಣ ಭೇದಿಸಿ, 162 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಕಾನೂನು ಕ್ರಮ ಜರುಗಿಸಲಾಗಿದೆ.

ಜಿಲ್ಲೆಯಲ್ಲಿ 5,54,89,001/– ಮೌಲ್ಯದ ಮಾಲು ಕಳುವಾಗಿರುತ್ತದೆ. ಅದರ ಪೈಕಿ ಒಟ್ಟು ರೂ. 2,15,53,637/–ಮೌಲ್ಯದ ಮಾಲು ವಶಪಡಿಸಿಕೊಳ್ಳಲಾಗಿದೆ. 96 ದ್ವಿ–ಚಕ್ರವಾಹನಗಳು (ಅಂದಾಜು ಮೌಲ್ಯ 85,83,557/–), 118 ತೊಲೆ ಬಂಗಾರದ ಆಭರಣಗಳು (ಅಂದಾಜು ಮೌಲ್ಯ 42,31,200/–), 30 ತೊಲೆ ಬೆಳ್ಳಿ ಆಭರಣಗಳು (ಅಂದಾಜು ಮೌಲ್ಯ 95.300/–), 25 ಮೊಬೈಲ್ ಫೋನ್‌ಗಳು (ಅಂದಾಜು ಮೌಲ್ಯ 2,05,000/–,) ನಗದು ಹಣ 11,71,580/, ಎಲೆಕ್ಟ್ರಾನಿಕ್ಸ್ ವಸ್ತುಗಳು (3,50,000/–) ಗಂದದ ಕಟ್ಟಿಗೆ, ಮತ್ತು ಟಯೋಟ್ ಕಾರ್(37,45,000/–), ಕ್ಯಾಮರ (12,63,000/–), 01 ಕಾರ್, 01 ಕೆ.ಎಸ್.ಆರ್.ಟಿ.ಸಿ ಬಸ್, 03 ಆಕಳು, ಹಾಗೂ 05 ಕುರಿ, 03 ಪಂಪಸೇಟ್ ಹಾಗೂ ಇತರೇ ಸಾಮಾಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.



ಮೈಕ್ರೋ ನ್ಯೂಸ್

## ೩೩ನೇ ವರ್ಷದ ಶಂಕರತತ್ವ ಚಿಂತನ ಸಂಭ್ರಮ ಇಂದು

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಸಂಗೀತ ಭಾರತಿ, ವಿಜಯನಗರ ಜಿಲ್ಲಾ ಅದ್ವೈತ ಮಹಾಸಭಾದಿಂದ ಜೂ.30 ರಂದು ಭಾನುವಾರ ಸಂಜೆ 6ಕ್ಕೆ ನಗರದ ಮಹಿಳಾ ಸಮಾಜ ಶಾಲೆ ಆವರಣದಲ್ಲಿ ಶಂಕರ ತತ್ವ 390ನೇ ಮಾಸಿಕ ಚಿಂತನ ಸಂಭ್ರಮ, ಪ್ರಶಸ್ತಿ ಪ್ರದಾನ ಜರುಗಲಿದೆ ಎಂದು ಸಂಗೀತ ಭಾರತಿ ಸಂಸ್ಥಾಪಕ ಎಚ್.ಪಿ.ಕಲ್ಲಂಭಟ್ ತಿಳಿಸಿದ್ದಾರೆ.



390ನೇ ಪ್ರಶಸ್ತಿ ಪ್ರದಾನ ಸಮಾರಂಭದ ತಿಂಗಳ ವಿಶೇಷ ಅತಿಥಿಗಳಾಗಿ ಕಂಪ್ಲಿಯ ವಿಜಯನಗರ ಜನಪರ ಕರಕುಶಲಗಾರರ ಸಂಸ್ಥಾಪಕರಾದ ಸುಮಿತ್ರಮ್ಮ ಪರಶುರಾಮಪ್ಪ ಚಿತ್ರಗಾರ, ಗಂಗಾವತಿಯ ಪುರಾತತ್ವ ಶಾಸ್ತ್ರಜ್ಞರು, ಇತಿಹಾಸ ಸಂಶೋಧಕರ ಡಾ.ಶರಣಬಸಪ್ಪ ಕೋಲ್ಕರ್ ಉಪಸ್ಥಿತರಿರಲಿದ್ದಾರೆ.

ಸಂಜೆ 5ಕ್ಕೆ ಸಾಮೂಹಿಕ ಸೌಂದಯ್ಯ ಲಹರಿ ಪಾರಾಯಣ, ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ, ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ನಾಟ್ಯ ನಾದ ಕಲಾ ಕೇಂದ್ರದಿಂದ ಭರತನಾಟ್ಯ ಸಂಭ್ರಮ, ಸಂಜೆ 6 ಕ್ಕೆ ಭಕ್ತಿ ಸಂಗೀತ, ಸಂಜೆ 7ಕ್ಕೆ ಶಂಕರ ತತ್ವ ಚಿಂತನೆ ಕುರಿತು ಉಪನ್ಯಾಸಕರಾದ ಮಾಲವಿ ಕರಣಂ ಗುರುರಾಜ ಪ್ರಸ್ತುತಿಪಡಿಸಲಿದ್ದಾರೆ. 7.15ಕ್ಕೆ ರಾಜ್ಯಮಟ್ಟದ ವಿಶೇಷ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ತಿಳಿಸಿದ್ದಾರೆ.

## ನಾಳೆ ಪತ್ರಿಕಾ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ(ರಿ), ವಿಜಯನಗರ ಜಿಲ್ಲಾ ಘಟಕದಿಂದ ಜು.1 ರಂದು ಬೆಳಿಗ್ಗೆ 10.00ಕ್ಕೆ ನಗರದ ಹೋಟೆಲ್ ಮಲ್ಲಿಗೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾನಿಪ ಸಂಘದ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ ತಿಳಿಸಿದ್ದಾರೆ.



ಸಂಸದ ಇ.ತುಕರಾಂ ಉದ್ಘಾಟಿಸಲಿದ್ದಾರೆ. ಕಾನಿಪ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಆಶಯನುಡಿ ನುಡಿಯಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್ಪಿ ಶ್ರೀಹರಿಬಾಬು ಬಿ.ಎಲ್., ಜಿಪಂ ಸಿಇಒ ಬಿ.ಸದಾಶಿವ ಪ್ರಭು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಚ್.ಎನ್.ಮೊಹಮ್ಮದ್ ಇಮಾಮ್ ನಿಯಾಜಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಸಪೇಟೆ ಹಿರಿಯ ಸಹಾಯಕ ನಿರ್ದೇಶಕ ಗವಿಸಿದ್ದಪ್ಪ ಹೊಸಮನಿ ಉಪಸ್ಥಿತರಿರಲಿದ್ದಾರೆ. ಕಾನಿಪ ಸಂಘದ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ ಅಧ್ಯಕ್ಷತೆವಹಿಸುವರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಲಕ್ಷ್ಮಣ, ರಾಜ್ಯಸಮಿತಿ ಸದಸ್ಯ ಪಿ.ವೆಂಕೋಬನಾಯಕ ಉಪಸ್ಥಿತರಿರಲಿದ್ದಾರೆ ತಿಳಿಸಿದ್ದಾರೆ.

# ಅಸಹಾಯಕರ ಅಹವಾಲು ಆಲಿಸಿದ ಡಿಸಿ

## 197 ಅರ್ಜಿ ಸ್ವೀಕೃತ, ಸ್ಥಳದಲ್ಲೆ 24 ಅರ್ಜಿಗೆ ಪರಿಹಾರ

### ಹ.ಬೊ.ಹಳ್ಳಿ ಜನಸ್ಪಂದನದಲ್ಲಿ ಅಧಿಕಾರಿಗಳಿಗೆ ಡಿಸಿ ಖಡಕ್ ಸೂಚನೆ | ಸ್ವಚ್ಛತೆಗೆ ಆದ್ಯತೆ ನೀಡಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸ್ಥಳೀಯ ಆಡಳಿತದಿಂದ ಬಹುಕಾಲದಿಂದ ಪರಿಹಾರ ದೊರಕದ ಅನೇಕರು ಜಿಲ್ಲಾಧಿಕಾರಿಗಳ ಬರುವಿಕೆಗಾಗಿ ಕಾದು ಕುಳಿತಿದ್ದರು. ಅಸಹಾಯಕರು ಜಿಲ್ಲಾಧಿಕಾರಿಗಳ ಎದುರು ತಮ್ಮ ಅಳಲು ತೋಡಿಕೊಂಡು ಅಹವಾಲು ಸಲ್ಲಿಸಿದರು. ನಮ್ಮ ಗ್ರಾಮದಲ್ಲಿ ಶಾಲಾ ಕೊಠಡಿ ನಿರ್ಮಿಸಲು ಜಮೀನು ಮಂಜೂರು ಮಾಡಬೇಕು. ಜಮೀನಿಗೆ ಹೋಗಲು ಬಂಡಿ ದಾರಿ ನೀಡಬೇಕು. ಡಾ.ಅಂಬೇಡ್ಕರ್ ಭವನ, ಡಾ.ಬಾಬು ಜಗಜೀವನರಾಮ್ ಭವನ ನಿರ್ಮಾಣಕ್ಕೆ ಜಾಗ ನೀಡಬೇಕು. ಒತ್ತುವರಿಯಾದ ಜಮೀನನ್ನು ಬಿಡಿಸಿ ಸಾರ್ವಜನಿಕ ಉಪಯೋಗಕ್ಕೆ ನೀಡಬೇಕು, ಗ್ರಾಮಕ್ಕೆ ಸ್ಮಶಾನ ಭೂಮಿ ನೀಡಬೇಕು ಎನ್ನುವ ನಾನಾ ರೀತಿಯ ಅನೇಕ ಅರ್ಜಿಗಳು ಜನಸ್ಪಂದನ ಕಾರ್ಯಕ್ರಮದಲ್ಲಿ ಜನರು ಜಿಲ್ಲಾಧಿಕಾರಿಗಳಿಗೆ ಅಹವಾಲು ಸಲ್ಲಿಸದರು.

ಹಗರಿಬೊಮ್ಮನಹಳ್ಳಿಯ ತಾಲೂಕಾಡಳಿತದ ಸೌಧದ ಹೊರಾಂಗಣದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಶನಿವಾರ ಜರುಗಿದ ಜನಸ್ಪಂದನ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದ್ದರಿಂದ ಸಾರ್ವಜನಿಕ ಅಹವಾಲುಗಳ ಚರ್ಚೆ ಮತ್ತು ಪರಿಹಾರಕ್ಕೆ ಮಹತ್ವದ ವೇದಿಕೆಯಾಯಿತು. ನಾನಾ ರೀತಿಯ ಸಮಸ್ಯೆಯನ್ನು ಹೊತ್ತು ಬರುವ ಸಾರ್ವಜನಿಕರಿಗೆ ಅರ್ಜಿ ಸಲ್ಲಿಕೆಗೆ ಅನುಕೂಲವಾಗುವಂತೆ ಇಲಾಖಾವಾರು ಟೇಬಲ್‌ಗಳನ್ನು ಹಾಕಲಾಗಿತ್ತು. ಆಯಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯು ಸಾಲಾಗಿ ಕುಳಿತು ಸಾರ್ವಜನಿಕರ ಹೆಸರು ಮತ್ತು ಅವರ ಅರ್ಜಿಯ ವಿವರದ ಬಗ್ಗೆ ನೋಂದಾಯಿಸಿಕೊಂಡರು.

ಜಿಲ್ಲಾಧಿಕಾರಿ ಬೆಳಗ್ಗೆ ಸೈಕಲ್ ಏರಿ ನಗರ ಸಂಚಾರ ನಡೆಸಿದರು. ನಗರದ ವಿವಿಧೆಡೆ ಸಂಚರಿಸುವ ವೇಳೆಯಲ್ಲಿ ಸಾರ್ವಜನಿಕರೊಂದಿಗೆ ಆಪ್ತವಾಗಿ ಮಾತನಾಡಿ ಸ್ಪಂದನೆ ನೀಡಿದರು. ಜನರ ದೂರುಗಳ ಬಗ್ಗೆ ಯಾರು ಸಹ ಹಗುರವಾಗಿ ತೆಗೆದುಕೊಳ್ಳಬಾರದು. ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ನಿಯಮಿತವಾಗಿ ನಗರ ಸಂಚಾರ ನಡೆಸಿ ನಗರದೆಲ್ಲೆಡೆ ಶುಚಿತ್ವ ಕಾರ್ಯ ನಡೆಸಿ ಪಟ್ಟಣದ ಸೌಂದರ್ಯೀಕರಣದ ಬಗ್ಗೆ ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

**ಶಾಸಕರ ಸಮ್ಮುಖದಲ್ಲಿ ಕಾರ್ಯಕ್ರಮ**

ಶಾಸಕ ನೇಮಿರಾಜ್ ನಾಯಕ ಅವರ ಸಮ್ಮುಖದಲ್ಲಿ ಜನತಾ ದರ್ಶನ ಕಾರ್ಯಕ್ರಮಕ್ಕೆ ಬೆಳಗ್ಗೆ ಚಾಲನೆ ಸಿಕ್ಕಿತು. ಸಾಲಾಗಿ ನಿಂತು ವೇದಿಕೆ ಏರಿ ಬಂದ ಸಾರ್ವಜನಿಕರ ಅಹವಾಲುಗಳನ್ನು ಜಿಲ್ಲಾಧಿಕಾರಿಗಳು ನಿರಂತರ 4 ಗಂಟೆಗು ಹೆಚ್ಚು ಸಮಯ ಸಾವಧಾನದಿಂದ ಆಲಿಸಿದರು. ವೇದಿಕೆಯ ಎದುರಿಗೆ ಆಸನರಾಗಿದ್ದ ಜಿಲ್ಲಾಮಟ್ಟದ ಹಾಗೂ ತಾಲೂಕುಮಟ್ಟದ ಅಧಿಕಾರಿಗಳನ್ನು ವೇದಿಕೆಗೆ ಕರೆದು ಕೆಲವು ಅರ್ಜಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕೆಲವು ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಿದರು.

**ಅರ್ಜಿಗಳ ವಿವರ:**

ಕಂದಾಯ ಇಲಾಖೆಗೆ ಅತಿ ಹೆಚ್ಚು 82, ಪುರಸಭೆಗೆ 50, ತಾಲೂಕು ಪಂಚಾಯಿತಿಗೆ 31, ಕೃಷಿ ಇಲಾಖೆಗೆ 7, ಜೆಸ್ಕಾಂ ಇಲಾಖೆಗೆ 6, ಸಾರಿಗೆ ಇಲಾಖೆಗೆ 5, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಶಿಕ್ಷಣ ಇಲಾಖೆಗೆ ತಲಾ 3, ಆರೋಗ್ಯ ಇಲಾಖೆಗೆ 4, ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಗೆ 2 ಅರ್ಜಿಗಳು ಸೇರಿ ಒಟ್ಟು 197 ಅರ್ಜಿಗಳು ಸ್ವೀಕೃತಿಯಾದವು. ಈ ಪೈಕಿ ಸ್ಥಳದಲ್ಲೇ 24 ಅರ್ಜಿಗಳನ್ನು ವಿಲೇ ಮಾಡಲಾಯಿತು. ಇನ್ನುಳಿದ ಅರ್ಜಿಗಳನ್ನು ಆಯಾ ಇಲಾಖೆಗಳಿಗೆ ವರ್ಗಾಯಿಸಲಾಯಿತು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಪಂ ಸಿಇಒ ಸದಾಶಿವ ಪ್ರಭು ಬಿ., ಸಹಾಯಕ ಆಯುಕ್ತರಾದ ಮಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಮ್ ಪಾಶಾ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಹಸೀಲ್ದಾರ ಚಂದ್ರಶೇಖರ ಗಾಳಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಪರಮೇಶ್ವರಪ್ಪ, ಸಿಪಿಐ ವಿಕಾಸ ಪಿ.ಎಲ್., ಸಿಡಿಪಿಒ ಸಿಂಧೂ ಯಲಿಗಾರ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕುಮಟ್ಟದ ಅಧಿಕಾರಿಗಳು ಇದ್ದರು.

## ಕಾರ್ಮಿಕ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ

**ಹಂಪಿ ಟೈಮ್ಸ್ ಕೊಪ್ಪಳ**

ಕಾರ್ಮಿಕ ಇಲಾಖೆಯಡಿ ಬರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಈ ಮೂರು ಮಂಡಳಿಗಳ ಮೂಲಕ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದ್ದು, ಅರ್ಹ ಕಾರ್ಮಿಕರು ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸುಧಾ ಚಿ ಗರಗ ಅವರು ತಿಳಿಸಿದ್ದಾರೆ. >>4


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

E-Paper

Now HAMPI TIMES E-Paper has been reached

70000 PlUS Readers

Place Your Ads here
Reach New Audience

www.hampitimes.com
epaper.hampitimes.com
hampitimes@gmail.com
@hampitimes

Contact for News, Events & Advertisements
94486 33038

## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ದಿನಪತ್ರಿಕೆಗಳಲ್ಲಿ ಹೊಸತನ ಪ್ರಯೋಗಗಳು ವಿನೂತನ

ಒಂದು ಕಾಲದಲ್ಲಿ ದಿನಪತ್ರಿಕೆಗಳೆಂದರೆ ಓದುಗರಲ್ಲಿ ವಿಶೇಷ ಗೌರವವಿತ್ತು. ಪತ್ರಿಕೆಗಳು ಆ ಗೌರವವನ್ನು ಕಾಪಾಡಿಕೊಂಡು ಬರುತ್ತಿದ್ದವು. ದಿನಪತ್ರಿಕೆಗಳಲ್ಲಿ ಬರುವ ಸುದ್ದಿಗಳು ಸತ್ಯವೆಂದು ಓದುಗರು ನಂಬುತ್ತಿದ್ದರು. ಅದರಂತೆಯೇ ದಿನಪತ್ರಿಕೆಗಳೂ ಸಹ ಸತ್ಯದ ಸುದ್ದಿಗಳನ್ನೇ ಪ್ರಕಟಿಸುತ್ತಿದ್ದವು. ದಿನಂಪ್ರತಿ ಓದುಗರಿಗೆ ಬೆಳಗ್ಗೆ ಎದ್ದುಕೂಡಲೇ ಚಹಾ ಸೇವಿಸುವ ವೇಳೆ ದಿನಂಪ್ರತಿ ಯಾವುದಾದರೊಂದು ದಿನಪತ್ರಿಕೆ ಬೇಕೇ ಬೇಕಾಗುತ್ತಿತ್ತು. ದಿನಪತ್ರಿಕೆ ಓದದ ಹೊರತು ದಿನದ ದಿನಚರಿ ಆರಂಭವಾಗುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ದಿನಪತ್ರಿಕೆಗಳು ಓದುಗರ ಮೇಲೆ ಪ್ರಭಾವ ಬೀರಿದ್ದವು. ಆದರೆ ನೋಡಿ ಕಾಲ ಬದಲಾಗಬೇಕಲ್ಲವೇ ? ಅದರಂತೆ ಕಾಲ ಬದಲಾಗುತ್ತಾ ದಿನಪತ್ರಿಕೆಗಳು ತಮ್ಮ ಸ್ವರೂಪವನ್ನು ಓದುಗರಿಗೆ ಮತ್ತಷ್ಟು ಇಷ್ಟವಾಗುವ ರೀತಿಯಲ್ಲಿ ಬದಲಾಗತೊಡಗಿದವು. ಪುಟ ವಿನ್ಯಾಸದಲ್ಲಿ ಹೊಸತನ ಬರತೊಡಗಿದವು. ಅದನ್ನು ಓದುಗರೂ ಸಹ ಅಪ್ಪಿಕೊಂಡು ಬೆಂಬಲಿಸಿದರು. ಪತ್ರಿಕೆಗಳ ಪ್ರಸಾರ ಸಂಖ್ಯೆಯೂ ಹೆಚ್ಚಾಗತೊಡಗಿದವು. ಉತ್ತಮ ಸಿಬ್ಬಂದಿ ಪರಿಶ್ರಮದಿಂದ ಅತ್ಯುತ್ತಮ ಮತ್ತು ಆಕರ್ಷಣೀಯ ಹಾಗೂ ಬುದ್ಧಿವಂತಿಕೆ ಇರುವ ಹೆಡ್ಡಿಂಗ್‌ಗಳು ಬರತೊಡಗಿದವು ಮತ್ತು ಆ ಹೆಡ್ಡಿಂಗ್‌ಗಳು ಚರ್ಚೆಯ ವಿಷಯವಸ್ತುಗಳಾಗಿಯೂ ಬದಲಾದವು. ಬರುಬರುತ್ತ ದಿನಪತ್ರಿಕೆಗಳು ಕಪ್ಪು ಬಣ್ಣದಿಂದ ಕಲರ್‌ಫುಲ್ ಆಗಿ ಬದಲಾದವು. ಓದುಗರಿಗೆ ಇದು ಮತ್ತಷ್ಟು ಇಷ್ಟವಾಯಿತು. ಪ್ರಸಾರ ಸಂಖ್ಯೆಯೂ ದಿನೇದಿನೆ ಹೆಚ್ಚಾಗತೊಡಗಿತು. ಹೀಗೆ ಪ್ರಸಾರ ಸಂಖ್ಯೆ ಹೆಚ್ಚಾಗತೊಡಗಿದಂತೆ ಪತ್ರಿಕೆಗಳಿಗೆ ಇರುವ ಜವಾಬ್ದಾರಿ ಮತ್ತಷ್ಟು ಹೆಚ್ಚಾಗತೊಡಗಿತು. ಹೊಸ ಹೊಸ ದೈನಂದಿನ ಪತ್ರಿಕೆಗಳು ಮಾರುಕಟ್ಟೆಗೆ ಬಂದವು ಮತ್ತು ಅದರಲ್ಲಿ ಕೆಲವು ಪತ್ರಿಕೆಗಳು ಯಶಸ್ವಿಯೂ ಆದವು. ಉದಾಹರಣೆಗೆ ಈ ಮೊದಲಿದ್ದ ಸಂಯುಕ್ತ ಕರ್ನಾಟಕ, ಉದಯವಾಣಿ, ಪ್ರಜಾವಾಣಿಯಂತ ದೈತ್ಯ ಪತ್ರಿಕೆಗಳ ನಡುವೆಯೂ ವಿಜಯಕರ್ನಾಟಕ ಪತ್ರಿಕೆ ಶುರುವಾಯಿತು. ಅಚ್ಚರಿಯೆಂದರೆ ಹೊಸ ಓದುಗರನ್ನು ಸೃಷ್ಟಿಸುವ ಮೂಲಕ ಅದೂ ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಒಂದಾಯಿತು. ಇತ್ತೀಚೆಗೆ ವಿಜಯವಾಣಿ ಪತ್ರಿಕೆಯೂ ಮಾರುಕಟ್ಟೆಯಲ್ಲಿ ತನ್ನ ಪಾರುಪತ್ಯ ಸ್ಥಾಪಿಸಿದೆ. ಹೀಗೆ ಪತ್ರಿಕೆಗಳ ನಡುವೆ ಪೈಪೋಟಿ ಹೆಚ್ಚಾಗತೊಡಗಿದೆ. ಎಲ್ಲ ಪತ್ರಿಕೆಗಳೂ ಉತ್ತಮ ಸುದ್ದಿಗಳು, ಲೇಖನ ಮತ್ತು ಸಾಮಾಜಿಕ ಜವಾಬ್ದಾರಿ ಹೊಂದಿವೆ. ಇದೆಲ್ಲರದರ ನಡುವೆ ಓದುಗರನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳು ಸವಾಲು ತಳ್ಳಿಹಾಕುವಂತಿಲ್ಲ. ಹೀಗೆ ತಮ್ಮ ಓದುಗರು ಕೈಬಿಟ್ಟುಹೋಗದಂತೆ ಹೊಸಯತ್ನಗಳನ್ನು ದೈನಂದಿನ ಪತ್ರಿಕೆಗಳು ಮಾಡುತ್ತಲೇ ಬಂದಿವೆ ಮತ್ತು ಇದು ಹೀಗೇ ಮುಂದುವರಿಯಲಿದೆ. ಓದುಗರಿಗೆ ತಮಗಿಷ್ಟವಾದ ಪತ್ರಿಕೆಯನ್ನು ಯಾವ ಕಾರಣಕ್ಕೂ ಬಿಟ್ಟಿಲ್ಲ ಎಂಬುದು ಬೇರೆ ಮಾತು. ಅದರ ನಡುವೆಯೂ ಹೊಸ ಪತ್ರಿಕೆಗಳಿಗೆ ಸಹ ಓದು ಬೆಂಬಲಿಸುತ್ತಲೇ ಬಂದಿದ್ದಾನೆ. ಇಷ್ಟೆಲ್ಲ ಹೇಳಲು ನಮಗೆ ಕಾರಣವೂ ಇದೆ. ರಾಜ್ಯಮಟ್ಟದ ಪತ್ರಿಕೆಗಳ ಹೊಸತನ ಪ್ರಯೋಗಗಳ ನಡುವೆಯೂ ಸ್ಥಳೀಯ ಪತ್ರಿಕೆಗಳ ಮೌಲ್ಯ ತುಸು ಕಡಿಮೆಯಾದಂತೆ ಕಂಡುಬಂದರೂ ತಮ್ಮ ಘನತೆಯನ್ನು ಎಂದೂ ಮರೆತಿಲ್ಲ. ನಿಮ್ಮದೆ ಪತ್ರಿಕೆಯಾಗಿರುವ ಹಂಪಿ ಟೈಮ್ಸ್ ಈಗ ತನ್ನ ಓದುಗರಿಗೆ ಹೊಸತನವೊಂದನ್ನು ಒಂದು ವಾರದಿಂದ ನೀಡುತ್ತಾ ಬಂದಿರುವುದು ನೀಡಿ ನೋಡಿದ್ದೀರಿ. ಒಂದು ವರ್ಷ ಪೂರೈಸಿರುವ ಹಂಪಿ ಟೈಮ್ಸ್ ಈಗ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭ ಓದುಗರಿಗೆ ಹೊಸ ಅನುಭೂತಿ ನೀಡಲು ಹೊಸ ಪ್ರಯೋಗವೊಂದನ್ನು ಕೈಗೊಂಡಿದ್ದು, ಓದುಗರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಬಹುಶ ರಾಜ್ಯಮಟ್ಟದ ಯಾವ ಪತ್ರಿಕೆಗಳು ಮಾಡದ ಹೊಸ ಪ್ರಯೋಗ ಶುರುಮಾಡಿದೆ. ಅದೇನೆಂದರೆ ಹಂಪಿ ಟೈಮ್ಸ್‌ನಲ್ಲಿ ರಾಜ್ಯಮಟ್ಟದ ಖ್ಯಾತ ಲೇಖಕರು ಬರೆಯುವ ಲೇಖನಗಳನ್ನು ನೀವು ನೋಡೇ ಇರುತ್ತೀರಿ. ಈಗ ಈ ಲೇಖನಗಳನ್ನು ಪತ್ರಿಕೆಯಲ್ಲಿ ಅಥವಾ ಆನ್‌ಲೈನ್‌ನಲ್ಲಿ ಓದುವ ಜತೆಜತೆಗೆ ಅದನ್ನು ಕೇಳಲೂ ಬಹುದು. ಅಂಥ ತಂತ್ರಜ್ಞಾನವನ್ನು ಹಂಪಿ ಟೈಮ್ಸ್ ಅಳವಡಿಸಿಕೊಂಡಿದೆ. ಹಂಪಿ ಟೈಮ್ಸ್‌ನಲ್ಲಿ ಪ್ರಕಟವಾಗುವ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾ?ನ್ ಮಾಡುವ ಮೂಲಕ ಮೌಲ್ಯಯುತ ಲೇಖನಗಳನ್ನು ನೀವು ಕೇಳಬಹುದು. ಈ ಪ್ರಯತ್ನ ಹಂಪಿ ಟೈಮ್ಸ್ ಓದುಗರಿಗೆ ಹೊಸ ಅನುಭೂತಿ ನೀಡಬಹುದೆಂದು ನಮ್ಮ ನಂಬಿಕೆ. ಮುಂದಿನ ದಿನಗಳಲ್ಲಿ ಇದನ್ನು ಪ್ರಮುಖ ಸುದ್ದಿಗಳಿಗೂ ವಿಸ್ತರಿಸುವ ಚಿಂತನೆಯಿದೆ. ಇದಕ್ಕೆಲ್ಲ ನೀವು ಇಷ್ಟು ದಿನ ತೋರಿರುವ ಬೆಂಬಲವೇ ಕಾರಣ. ನಿಮ್ಮ ಬೆಂಬಲವೇ ನಮ್ಮ ಮುಂದಿನ ಪ್ರಯತ್ನಕ್ಕೆ ನಾಂದಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

**ಲಿಂಗವಂತರು ಧರಿಸುತ್ತಿದ್ದ ಲಿಂಗದ ಮೇಲೆ ತೆರಿಗೆಯನ್ನು ತುಳುವ ವಂಶದ ಅರಸರು ಹಾಕಿದ್ದು ತಿಳಿದು ಬರುತ್ತದೆ. ಇದರಿಂದ ಬೇಸರಗೊಂಡ ಲಿಂಗವಂತರು, ನೂರೊಂದು ವಿರಕ್ತರು ತಮ್ಮ ಮಠಗಳನ್ನು, ಹಂಪಿಯನ್ನು ತೊರೆದು ಬೇರೆ ಊರುಗಳತ್ತ ಹೊರಟು ಹೋದರು. ಹಂಪಿಯಲ್ಲಿದ್ದ ಹತ್ತಾರು ಮಠಗಳು ಬೇರೆ ಬೇರೆ ಸ್ಥಳಗಳಿಗೆ ಸ್ಥಳಾಂತರಗೊಂಡವು. ಲಿಂಗದ ಮೇಲೆ ತೆರಿಗೆಯನ್ನು ಹಾಕಿದ್ದೆ ವೀರಶೈವ ಲಿಂಗವಂತರಿಗೆ ಬೇಸರದ ಸಂಗತಿಯಾಯ್ತು. ಇದು ವೀರಶೈವ ಮತ್ತು ವೈಷ್ಣವ ಪರಂಪರೆಯ ನಡುವೆ ಸಮನ್ವತೆ ಇಲ್ಲದಂತಾಯಿತು...**

# ಹಂಪಿಯ ಶೈವ ಕ್ಷೇತ್ರದಲ್ಲಿ ಶೈವ-ವೈಷ್ಣವ ಸಂಘರ್ಷ





**ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯ**
**ರವನಿಯೊಳಗಲ್ಲಿ ನಿನ್ನಾಜ್ಞೆಗಳು ಸಲ್ಲಭರೆ**
**ಯವಿಚಾರ ಹೊಲ್ಲ ಹಂಪೆಗೆ ಹೋಹಡೆಡೆಯಿಲ್ಲ**
**ಕಾಶೀಪುರವನೆ ಸಾರ್ದು**
**ನಿವಗೆ ಕೊಡುವರ್ಥಮಂ ಕೊಡುವೆನಿನ್ನಳಲಿಸದೆ**
**ಶಿವಮೂರ್ತಿ ಮುನಿನಾಥ ಕರುಣಿಸನೆ ಹೋಗುವ**
**ಸ್ತುವ ಬೇಗ ಮಾಡೆಂದಡಿಗೆರಿಗಿ ನಡೆದನಾ ಧೈರ್ಯ ನಿಧಿ ಭೂಪಾಲನು.**
**– ಹರಿಶ್ಚಂದ್ರ ಕಾವ್ಯ.**

ಸಪ್ತ ದೀಪಗಳು ಸೇರಿ ಎಲ್ಲವೂ ನಿನ್ನ ಆಳ್ವಿಕೆಗೆ ಒಳಪಟ್ಟರು ಹೇಮಕೂಟ(ಹಂಪಿ) ವಾರಣಾಸಿಗಳು ನಿನ್ನ ಆಳ್ವಿಕೆಯಿಂದ ಹೊರಗೆ ಉಳಿಯುತ್ತವೆ. ಹೇಮಕೂಟಕ್ಕೆ ಒಡೆಯ ವಿರೂಪಾಕ್ಷನಾದರೆ ವಾರಣಾಸಿಗೆ ವಿಶ್ವೇಶ್ವರನೇ (ವಿಶ್ವನಾಥ )ಒಡೆಯ.

ಈ ಸ್ಥಳಗಳಲ್ಲಿ ಯಾವ ಅರಸರ ಆಜ್ಞೆಗಳು ನಡೆಯುವುದಿಲ್ಲವೆಂದು, ವಿಶ್ವಾಮಿತ್ರನಿಗೆ ಹರಿಶ್ಚಂದ್ರ ತನ್ನ ಕಾವ್ಯದಲ್ಲಿ ಹೇಳುತ್ತಾನೆ. ಇಷ್ಟೇ ಅಲ್ಲ,ಇದಕ್ಕೂ ಮೊದಲು ಹರಿಹರ ಕೂಡ ತನ್ನ ಹೆಸರನ್ನು ಕೈ ಬಿಟ್ಟು ವಿರೂಪಾಕ್ಷನ ಹೆಸರಿನಲ್ಲಿ ರಗಳೆಗಳನ್ನು ಬರೆಯುತ್ತಾನೆ. ಎನ್ನೊಡೆಯ ಪಂಪಾಪುರದರಸ ಶ್ರೀ ವಿರೂಪಾಕ್ಷ ಎಂದು ಧ್ಯಾನಿಸುತ್ತಾನೆ. ಹಂಪಿ ಯಾರ ಒಡೆತನಕ್ಕೂ ಒಳಗಾಗದ ದೇವರ ಸಾಮ್ರಾಜ್ಯ. ಪೂರ್ವದಲ್ಲಿ ಕಿನ್ನರೇಶ್ವರ ಪಶ್ಚಿಮದಲ್ಲಿ ಸೋಮೇಶ್ವರ ಉತ್ತರದಲ್ಲಿ ವಾಣಿವಿರಭದ್ರೇಶ್ವರ ದಕ್ಷಿಣದಲ್ಲಿ ಜಂಬುಕೇಶ್ವರ ವರೆಗೆ ವಿಸ್ತರಿಸಿಕೊಂಡಿದ್ದ ಹಂಪಿಯ ಪರ್ಯಾಯ ನಾಮ "ವಿರೂಪಾಕ್ಷ" ವಾಗಿತ್ತು. ಶೈವ ಕ್ಷೇತ್ರವಾಗಿ ಇದು ತೇತ್ರಾಯುಗದಿಂದ ಇಂದಿನ ವರೆಗೂ ಶಿವನ ಆರಾಧನೆ ನಡೆದುಕೊಂಡು ಬಂದಿದೆ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Hampi Times E-paper
SCAN AND READ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಸಂಗಮ ವಂಶದ ಅರಸರುಗಳಾದ ಇಮ್ಮಡಿ ಹರಿಹರ ಪ್ರೌಢ ದೇವರಾಯರ ಕಾಲದಲ್ಲಿ ವಿಶೇಷವಾಗಿ ಪರಮತ ಸಹಿಷ್ಣತೆಯ ನೆಲೆಯಾಗಿತ್ತು. ಶೈವ ವೀರಶೈವದ ಆರಾಧನೆಯ ಕೇಂದ್ರ ವಾಗಿತ್ತು. ಜೊತೆಗೆ ವೈಷ್ಣವರಿಗೂ ಆಶ್ರಯ ನೀಡಿದ್ದವರು. ಆದರೆ 15ನೇ ಶತಮಾನದ ವಿಜಯನಗರದ ತುಳು ವಂಶದ ಮತ್ತು ಅರವೀಡು ವಂಶದ ಅರಸರು ವೈಷ್ಣವ ಪಂಥದತ್ತ ಒಲವು ತೋರಿಸಿದ್ದರಿಂದ ಶೈವ ಧಾರ್ಮಿಕ ಪರಂಪರೆಯಿಂದ ವೈಷ್ಣವ ಧಾರ್ಮಿಕ ಪರಂಪರೆ ಕಡೆ ಹಂಪಿ ಬದಲಾಯಿತು. ಹಂಪಿಯಿಂದ ತಿರುಪತಿಯತ್ತ ಶ್ರೀ ವಿರೂಪಾಕ್ಷನ ಬದಲು ಶ್ರೀ ವೆಂಕಟೇಶ ಎಂದು ಬದಲಾಯಿತು. ಶೈವ ಕೇಂದ್ರ ವೈಷ್ಣವ ಕೇಂದ್ರವಾಗಿ ಬದಲಾದಂತೆ ತುಳುವವಂಶದ ಅರಸರು ಲಿಂಗಧಾರಿಗಳಿಗೆ ತೆರಿಗೆಯನ್ನು ಸಹ ಹಾಕಿದ್ದರಿಂದ ಶೈವ ಪರಂಪರೆಯ ವಿರಕ್ತರು, ಭಕ್ತರು ಹಂಪಿಯನ್ನು ಹಂಪಿಯ ಮಠಗಳನ್ನು ಬಿಟ್ಟು ಎಡೆಯೂರು ಹಾಗೂ ಬೇರೆ ಕಡೆ ಹೊರಟು ಹೋದರು. ಒಂದು ಕಾಲಘಟ್ಟದಲ್ಲಿ ಹಂಪಿ ಶೈವ-ವೈಷ್ಣವ ಧಾರ್ಮಿಕ ಪರಂಪರೆಯಲ್ಲಿ ಉಂಟಾದ ಸಂಘರ್ಷದಲ್ಲಿ ಸಿಕ್ಕಿಹಾಕಿಕೊಂಡಿತ್ತು. ಈ ಬಗ್ಗೆ ಒಂದಷ್ಟು ಮಾಹಿತಿ.

ಗಿರಿಜೆ ಶಿವನನ್ನು ಕುರಿತು ತಪಸ್ಸು ಮಾಡಿದಾಗ ಹಂಪಿ ಹೇಮ ಕೂಟದಲ್ಲಿ ಶಿವ ಪ್ರತ್ಯಕ್ಷನಾಗಿ ಕೊನೆಗೆ ಇಲ್ಲಿಯೇ ಶಿವ ಪಾರ್ವತಿಯರ ವಿವಾಹ ನಡೆದ ಪ್ರದೇಶವಾಗಿದೆ. ಹೀಗಾಗಿ ಹೇಮಕೂಟ ಗಿರಿಜಾ ಕಲ್ಯಾಣ ನಡೆದ ಪವಿತ್ರ ಧಾರ್ಮಿಕ ಕ್ಷೇತ್ರವಾಗಿ ನಡೆದುಕೊಂಡು ಬಂದಿದೆ.

ಪಂಪಾ ವಿರುಪಾಕ್ಷರು ಆರಾಧ್ಯ ದೈವಗಳಾಗಿ ಶಿವ ಆರಾಧನೆ ಈ ಪ್ರದೇಶದಲ್ಲಿ ನಡೆದುಕೊಂಡು ಬಂದಿದೆ. ದಕ್ಷಿಣದ ಕಾಶಿಯೆಂದೇ ಜನರ ನಂಬಿಕೆ. 13ನೇ ಶತಮಾನದಲ್ಲಿ ಹರಿಹರ ರಾಘವಾಂಕ ಇವರ ಸಾಹಿತ್ಯಕ್ಕೆ ಮೂಲ ಪ್ರರಣೆ ವಿರುಪಾಕ್ಷನೆ. ಹರಿಹರನ ಪ್ರಕಾರ ಈ ಸಾಮ್ರಾಜ್ಯದ ಪರ್ಯಾಯ ನಾಮ ವಿರೂಪಾಕ್ಷ, ಇಲ್ಲಿ ಯಾರೇ ಕಾವ್ಯವನ್ನೇ ಬರೆಯಲಿ ಅಥವಾ ರಾಜ್ಯವನ್ನೇ ಆಳಲಿ ಅದರ ಅಧಿಕಾರ ವಿರೂಪಾಕ್ಷನದ್ದೇ ಎಂದಿದ್ದಾನೆ. ಹೀಗಾಗಿ ಹರಿಹರ ತನ್ನ ರಗಳೆಗಳನ್ನು ವಿರೂಪಾಕ್ಷನ ಹೆಸರಿನಲ್ಲೇ ಬರೆದಿದ್ದಾನೆ. ವಿಜಯನಗರ ಸಾಮ್ರಾಜ್ಯದ ಸಂಗಮ ಅರಸರುಗಳು ತಮ್ಮ ಹೆಸರುಗಳನ್ನು ಕೈ ಬಿಟ್ಟು ವಿರೂಪಾಕ್ಷನ ಹೆಸರಿನಿಂದಲೇ ಆಡಳಿತ ಮಾಡಿದ್ದಾರೆ. ಹಾಗೂ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ಎಂದೇ ದಾಖಲಿಸಿದ್ದಾರೆ. ಹೀಗಾಗಿ ಹರಿಹರ ಮತ್ತು ಸಂಗಮ ವಂಶದ ಅರಸರು ಗಳಿಗೆ ವಿರುಪಾಕ್ಷನೆ ದೇವರು. ನಾವು ಅವನ ಪ್ರತಿನಿಧಿ ಎಂದು ಸಾಹಿತ್ಯ ರಚನೆ ಮಾಡಿದ್ದರೆ, ಸಂಗಮ ವಂಶದ ಅರಸರು ವಿರೂಪಾಕ್ಷ ನೇ ರಾಜ ನಾವು ಅವನ ಪ್ರತಿನಿಧಿ ಎಂದು ಆಡಳಿತ ಮಾಡಿದ್ದಾರೆ. ಪ್ರೌಢದೇವರಾಯನ ಕಾಲದಲ್ಲಿ ಹಂಪಿಯು ಶೈವ-ವೀರಶೈವದ ನೆಲವಾಗಿತ್ತು.

ಹರಿಹರನ ಕೆಲವು ರಗಳೆಗಳಾದ ಪಂಚಾಕ್ಷರಿ ಮಂತ್ರ ಮಹಿಮೆ ರಗಳೆ, ವಿಭೂತಿಯ ರಗಳೆ, ಲಿಂಗಾರ್ತನೆ ರಗಳೆ ಮೊದಲಾದವುಗಳು ಶಿವ ಭಕ್ತಿಯ ಮತ್ತು ಶಿವ ಧರ್ಮದ ಕುರಿತು ರಚಿಸುವುದು ಆರಾಧನೆ ಮತ್ತು ಶಿವನನ್ನೇ ಹಾಡಿ ಹೊಗಳಿದ ರಗಳೆಗಳನ್ನು ರಚಿಸಿದ್ದಾನೆ ರಾಘವಾಂಕನು ಸಹ ಸೋಮನಾಥ ಚರಿತ್ರೆಯಲ್ಲಿ ಸೌರಾಷ್ಟ್ರದ ಶಿವಭಕ್ತನಾದ ಅಧ್ಯಯನಂಬ ಶರಣ ವ್ಯಕ್ತಿತ್ವದ ಸಮಕಾಲಿನ ಜೀವನ ಮೌಲ್ಯಗಳು ರಚಿಸಿದ್ದಾರೆ. ಪ್ರೌಢದೇವರಾಯ ಶೈವನಿಷ್ಠ ನಾಗಿದ್ದ ಇವನು ಮುಂದೆ ವೀರಶೈವ ಆಗಿ ಪರಿವರ್ತನೆ ಹೊಂದಿದ್ದು ಉಲ್ಲೇಖಗಳಿಂದ ತಿಳಿದು ಬರುತ್ತದೆ ಚಾಮರಸ ನಿಂದ ಪ್ರೌಢದೇವರಾಯನು ವೀರಶೈವ ದೀಕ್ಷೆಯನ್ನು ಪಡೆದಿದ್ದಾನೆ. ಶೈವ ತತ್ವದಿಂದ ಶರಣ ತತ್ವಕ್ಕೆ ಇವನ ಕಾಲಘಟ್ಟ ಬದಲಾಯಿತು. ನೂರೊಂದು ವಿರಕ್ತರಿಗೆ ಆಶ್ರಯ ತಾಣವಾಗಿದದ್ದು ಪ್ರೌಢದೇವ ರಾಯನ ಆಡಳಿತ. ಲಕ್ಕಣ್ಣ ದಂಡೇಶ, ಕಲ್ಲಮಠದ ಪ್ರಭುದೇವ, ವೀರಣ್ಣನೊಡೆಯ, ಚಾಮರಸ, ಕರಸ್ಥಲದ ನಾಗಿದೇವ, ಕುಮಾರ ಬಂಕನಾಥ, ಮೊದಲಾದ ನೂರ ಒಂದು ವಿರಕ್ತರು ಹಂಪಿಯಲ್ಲಿ ನೆಲೆ ನಿಂತಿದ್ದರು. ಚಾಮರಸನು ಪ್ರಭುಲಿಂಗ ಲೀಲೆ ಲಕ್ಕಣ್ಣ ದಂಡೇಶನ ಶಿವ ತತ್ವ ಚಿಂತಾಮಣಿ ತತ್ವ, ಕಲ್ಮಠದ ಪ್ರಭುದೇವರ ಲಿಂಗ ಲೀಲಾ ವಿಲಾಸ ಚರಿತ್ರ, ಹೀಗೆ ನೂರಾರು ಗ್ರಂಥಗಳು ಪ್ರೌಢದೇವರಾಯನ ಕಾಲದಲ್ಲಿ ರಚಿಸಲ್ಪಟ್ಟು, ಶರಣ ಸಂಸ್ಕೃತಿಯ ಪುನರುತ್ಥಾನದ ಕೇಂದ್ರವಾಗಿತ್ತು. ಈ ಕಾಲಘಟ್ಟವನ್ನು ವೀರಶೈವ ಸಮುದ್ಧರಣಯುಗವೆಂದುಸಹ ಕರೆಯಲಾಗಿದೆ.

### ವೈಷ್ಣವ ಧರ್ಮದ ಪ್ರಭಾವ

ಸಂಗಮ ವಂಶದ ಇಮ್ಮಡಿ ಹರಿಹರ ಪ್ರೌಢದೇವರಾಯ ರಿಂದ ತಿರುಮಲ ಮತ್ತು ಒಂದನೇ ಶ್ರೀರಂಗರ ಕಾಲದವರಿಗೆ ವಿಜಯನಗರ ಅರಸರು ವಿರುಪಾಕ್ಷನ ಮೇಲೆ ನಂಬಿಕೆ, ಕೃಪಾಕಟಾಕ್ಷವನ್ನು ನಂಬಿಕೊಂಡು ಆಡಳಿತವನ್ನು ನಡೆಸಿದ್ದಾರೆ. ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವರಿಗೂ ಸಂಗಮ ವಂಶದ ಅರಸರು ಆಶ್ರಯವನ್ನು ನೀಡಿದವರು ಇವರ ಕಾಲದಲ್ಲಿ ವೈಷ್ಣವ ದೇಲಯಗಳ ಸ್ಥಾಪನೆಗೆ ಅಸ್ತಿಭಾರವನ್ನು ಹಾಕುತ್ತಾರೆ. ಸಂಗಮ ವಂಶದ ದೊರೆಗಳು ಸರ್ವಧರ್ಮದ ಸಮಾನತೆಯನ್ನು ಸಾಧಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದರು, ಆದರೆ ಇಮ್ಮಡಿ ವೆಂಕಟನ ಕಾಲದಿಂದ ವಿಜಯನಗರದ ಧಾರ್ಮಿಕ ಪರಂಪರೆಯಲ್ಲಿ ಬದಲಾವಣೆ ಪ್ರಾರಂಭವಾಯಿತು. ಶಿವನ ಆರಾಧನೆಯಿಂದ ವೈಷ್ಣವ ಆರಾಧನೆಗೆ ಧಾರ್ಮಿಕ ಪರಂಪರೆ ಬದಲಾಯಿತು. ಶ್ರೀ ವಿರೂಪಾಕ್ಷ ಅಂಕಿತದ ಸ್ಥಾನದಲ್ಲಿ ಶ್ರೀ ವೆಂಕಟೇಶ ಅಂಕಿತವು ಕಾಣಿಸಿಕೊಂಡಿತು. ಅರಸನ ಶಾಸನಗಳು ಆರಂಭದ ಸ್ತುತಿಗಳಲ್ಲಿ ಶ್ರೀ ವೆಂಕಟೇಶ, ಶ್ರೀರಾಮ ಅಥವಾ ವಿಷ್ಣುವಿನ ಹೆಸರುಗಳು ಕಂಡುಬಂದಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ ವಿರೂಪಾಕ್ಷ ನಿಗೆ, ಶೈವ ದೇವಾಲಯಗಳಿಗೆ ನೀಡುತ್ತಿದ್ದ ದಾನದತ್ತಿಗಳು ವೆಂಕಟೇಶ್ವರನ ಸನ್ನಿಧಿಯಲ್ಲಿ ಕೊಡುವುದು ಪ್ರಾರಂಭವಾಯಿತು ಹಂಪಿಯಿಂದ ಪೆನ್ನಕೊಂಡಕ್ಕೆ ಹಾದಿ ಬದಲಾಯಿತು. ವಿರುಪಾಕ್ಷನ ಸನ್ನಿಧಿಯಿಂದ ತಿರುಪತಿ ವೆಂಕಟೇಶ್ವರನ ಸನ್ನಿಧಿಗೆ ಧಾರ್ಮಿಕ ಆಚರಣೆಗಳು ಬದಲಾದವು.

ಸಾಳವ ದೊರೆಗಳ ನಂತರ ತುಳು ವಂಶದ ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯ, ಸದಾಶಿವರಾಯರು ತಮ್ಮಗಳಗೆ ಆಡಳಿತದ ಕಾಲಘಟ್ಟದಲ್ಲಿ ವೈಷ್ಣವ ಧರ್ಮದ ಅಭಿಮಾನ ಪರಾಕಾಷ್ಠೆಯನ್ನು ಮುಟ್ಟಿತ್ತು ಎಂದು ಅಧ್ಯಯನಗಳಿಂದ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ವೈಷ್ಣವ ಆಚರಣೆಯ ಹಜಾರರಾಮ ದೇವಸ್ಥಾನ, ವಿಜಯ ವಿಠಲ, ಕೃಷ್ಣದೇವಸ್ಥಾನ, ನರಸಿಂಹ ಮೊದಲಾದ ದೇವಾಲಯಗಳು ನಿರ್ಮಿಸಲ್ಪಟ್ಟವು. ಮಧ್ವಪರಂಪರೆಯ ವ್ಯಾಸ ತೀರ್ಥರು ಕೃಷ್ಣದೇವರಾಯನ ರಾಜಗುರುಗಳಾಗಿದ್ದರು.

ವಿಠಾಲಾಪುರ ವೈಷ್ಣವ ಕೇಂದ್ರವಾಗಿತ್ತು. ಅರವೀಡು ಅರಸು ವಂಶದ ಅರಸರ ಕಾಲಘಟ್ಟದಲ್ಲಿಯೂ ಶ್ರೀವೈಷ್ಣ ಪಂತಕ್ಕೆ ಪ್ರೋತ್ಸಾಹ ಮನ್ನಣೆಗಳು ದೊರೆತು ರಾಮರಾಯ ಅರಸ ನಿಷ್ಠಾವಂತ ವೈಷ್ಣವ ಪಂಥದ ಅನುಯಾಯಿಯಾಗಿದ್ದನು. ಇವರ ಕಾಲದಲ್ಲಿ ಶ್ರೀ ವೈಷ್ಣವ ಆಚಾರ್ಯರಿಗೆ ಸಾಕಷ್ಟು ಪೋಷಣೆಗಳು ದೊರೆತವು ತಿರುಪತಿ, ತಿರುಮಲೈ ,ಶ್ರೀರಂಗಂ ಮೊದಲಾದ ವೈಷ್ಣವ ದೇವಾಲಯಗಳಿಗೆ ದಾನದತ್ತಿಗಳನ್ನು ತಮ್ಮ ನೀಡಲಾಯಿತು.

> **ಸುಮಾರು 400 ವರ್ಷಗಳ ಹಿಂದಿನ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ನಿಖರವಾಗಿ ಕಟ್ಟಿಕೊಡಲು ನಮ್ಮ ಚರಿತ್ರಕಾರರಿಗೆ, ವಿದ್ವಾಂಸರಿಗೆ ಈಗಲೂ ಸಾಧ್ಯವಾಗುತ್ತಿಲ್ಲ ಏಕೆ ಎನ್ನುವುದಕ್ಕೆ, "ವಿಜಯನಗರದ ಅಧ್ಯಯನಕ್ಕೆ ಕೊನೆಯಿಲ್ಲ ಅಧ್ಯಯನವು ನಿರಂತರವಾಗಿ ನಡೆಯುತ್ತಲೇ ಇರುವುದರಿಂದ ನಿರ್ಣಾಯಕ ಘಟ್ಟ ತಲುಪಲು ಇನ್ನೂ ಯಾರಿಂದಲೂ ಸಾಧ್ಯವಾಗುತ್ತಿಲ್ಲ.**
> **– ಡಾ. ಡಿ.ವಿ. ಪರಮಶಿವಮೂರ್ತಿ**
> **ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗೂ ಶಾಸನ ತಜ್ಞರು**

### ಲಿಂಗಧರಿಸಿದವರಿಗೆ ತೆರೆಗೆ ಹಾಕುವ ಪದ್ಧತಿ

ಸಾಳವ ತುಳುವ ವಂಶದ ಅರಸರು ಶ್ರೀ ವೈಷ್ಣವ ಪಂಥದತ್ತ ಒಲವು ತೋರಿದರು. ಕ್ರಿಸ್ತಶಕ 1550ರ ಶಾಸನದಲ್ಲಿ ಲಿಂಗಧಾರಿಗಳು ಕೊಡುವಂಥ ಲಿಂಗ ತೆರಿಗೆಯನ್ನು ವೀರೇಶ್ವರ ದೇವರಿಗೆ ಸಮರ್ಪಣೆ ಮಾಡಿದರು ಎಂಬದು ಶಾಸನವೊಂದರಲ್ಲಿ ಬರುತ್ತದೆ.

ಇದರಿಂದ ಆ ಕಾಲದ ಲಿಂಗವಂತರು ಧರಿಸುತ್ತಿದ್ದ ಲಿಂಗದ ಮೇಲೆ ತೆರಿಗೆಯನ್ನು ತುಳುವ ವಂಶದ ಅರಸರು ಹಾಕಿದ್ದು ತಿಳಿದು ಬರುತ್ತದೆ. ಇದು ಲಿಂಗವಂತರಿಗೆ ಬೇಸರದ ಸಂಗತಿ ಯಾಗುತ್ತದೆ. ಇದರಿಂದ ನೂರೊಂದು ವಿರಕ್ತರು ತಮ್ಮ ಮಠಗಳನ್ನು, ಹಂಪಿಯನ್ನು ತೊರೆದು ಬೇರೆ ಊರುಗಳತ್ತ ಹೊರಟುಹೋದರು. ಹಂಪಿಯಲ್ಲಿ ಇದ್ದ ಹತ್ತಾರು ಮಠಗಳು ಬೇರೆ ಬೇರೆ ಸ್ಥಳಗಳಿಗೆ ಸ್ಥಳಾಂತರಗೊಂಡವು. ಲಿಂಗದ ಮೇಲೆ ತೆರಿಗೆಯನ್ನು ಹಾಕಿದ್ದು ವೀರಶೈವ ಲಿಂಗವಂತರಿಗೆ ಬೇಸರದ ಸಂಗತಿ ಆಯ್ತು ಇದು ವೀರಶೈವ ಮತ್ತು ವೈಷ್ಣವ ಪರಂಪರೆಯ ನಡುವೆ ಸಮನ್ವತೆ ಇಲ್ಲದಂತಾಯಿತು.

ವಿಜಯನಗರದ ಸಾಮ್ರಾಜ್ಯದ ನಂತರ ಚರಿತ್ರೆಯನ್ನು ರಚಿಸಿದ ಚರಿತ್ರಕಾರರು ಸಹ ಹಂಪಿಗೆ ಒಂದು ಚಾರಿತ್ರಿಕ ನ್ಯಾಯವನ್ನು ಒದಗಿಸಿದೆ ಮಲತಾಯಿ ಧೋರಣೆಯನ್ನು ತೋರಿದ್ದಾರೆ ಎನ್ನಲಾಗಿದೆ. ವಿಜಯನಗರದ ಅರಸರಲ್ಲಿ ಇಮ್ಮಡಿ ಹರಿಹರ ಮತ್ತು ಪ್ರೌಢದೇವರಾಯ ಅತ್ಯಂತ ಪ್ರಬಲ ಮತ್ತು ಸಮರ್ಥರಾದ ಅರಸರಾಗಿ ಹಂಪಿಯನ್ನು ಶೂನ್ಯದಿಂದ ಕಟ್ಟಿ ಬೆಳೆಸಿದವರು. ಇವರ ಕಾಲದಲ್ಲಿ ಹಂಪಿಯನ್ನು ಒಂದು ನಗರವನ್ನಾಗಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿತ್ತು.ಮುಂದೆ ಬಂದ ಅರಸರುಗಳು ತಮ್ಮ ಅದನ್ನು ಮುಂದುವರಿಸಿಕೊಂಡು ಬಂದು ಹಂಪಿಯು ಅತ್ಯುನ್ನತ ಸ್ಥಾನವನ್ನು ಪಡೆಯಿತು. ಆದರೆ ಚರಿತ್ರಕಾರರು ಇಮ್ಮಡಿ ಹರಿಹರ, ಪ್ರೌಢ ದೇವರಾಯರ ಚರಿತ್ರೆಯನ್ನು ಹೆಚ್ಚಿನ ಮಟ್ಟದಲ್ಲಿ ದಾಖಲಿಸದೆ ಕೇವಲ ಕೃಷ್ಣದೇವರಾಯನನ್ನು ಮಾತ್ರ ವೈಭವೀಕರಿಸಿ ಬರೆದಿದ್ದಾರೆ ಎನ್ನುವ ಅಭಿಪ್ರಾಯಗಳು ಕೇಳಿಬಂದಿವೆ. ಕೃಷ್ಣದೇವರಾಯನ ಕಾಲವನ್ನು ವಿಜಯನಗರದ ಸುವರ್ಣಯುಗ ಎಂದು ಕರೆಯಲಾಗುತ್ತಿದೆ, ಆದರೆ ಇದಕ್ಕೂ ಮುನ್ನ ಪ್ರೌಢದೇವರಾಯನ ಕಾಲವು ಸಹ ಸುವರ್ಣ ಯುಗದ ಕಾಲವೆಂದು ಕೆಲವು ಚರಿತ್ರಕಾರರ ಅಭಿಪ್ರಾಯವಾಗಿದೆ. ಪ್ರೌಢ ಪ್ರೌಢದೇವರಾಯ ವೀರಶೈವನೆಂಬ ಕಾರಣಕ್ಕೆ ಚರಿತ್ರೆಕಾರರು ಇವರ ಚರಿತ್ರೆಯನ್ನು ದಾಖಲಿಸಲು ಹಿಂಜರಿದಿದ್ದಾರೆ, ಆದರೆ ಕೃಷ್ಣದೇವರಾಯನು ವೈಷ್ಣವನಾಗಿದ್ದರಿಂದ ಅವರನ್ನು ಹೆಚ್ಚಿನ ರೀತಿಯಲ್ಲಿ ಒಂದು ವರ್ಗದ ಚರಿತ್ರೆಕಾರರು ದಾಖಲಿಸಿದ್ದಾರೆ ಎನ್ನುವ ಅಭಿಪ್ರಾಯಗಳು ಇವೆ.

ವಿಜಯನಗರದ ಸಾಮ್ರಾಜ್ಯದ ಮೇಲೆ ಮುಸ್ಲಿಮರ ದಾಳಿಯಂದಾಗಿ ಸಾಮ್ರಾಜ್ಯ ಅವನತಿ ಹೊಂದಿತು ಎಂಬುದು ಚರಿತ್ರೆಯನ್ನು ಓದಿಕೊಂಡು ಬಂದಿದ್ದೇವೆ. ಕಳೆದ ಎರಡು ಮೂರು ದಶಕಗಳಿಂದ ಹಂಪಿಯ ಚರಿತ್ರೆಯನ್ನು ಕಟ್ಟಿಕೊಡುವ ಆಲೋಚನೆ ರೀತಿ ಬದಲಾಗಿದೆ. ಹಂಪಿಯಲ್ಲಿ ವೈಷ್ಣವ ದೇವಾಲಯಗಳು ಮಾತ್ರ ಹಾಳಾಗಿದ್ದು, ಶೈವ ದೇವಾಲಯಗಳು ಪೂಜಾ ಗೊಳ್ಳುತ್ತಿವೆ ಅದಕ್ಕೆ ಕಾರಣ ಶೈವರು ವೈಷ್ಣವ ದೇವಾಲಯಗಳನ್ನು ಒಡೆದು ಹಾಕಿದ್ದಾರೆ ಎಂಬುದು ಕೆಲವರು ವಿಶ್ಲೇಷಣೆ. ಆದರೆ ಮತ್ತೆ ಕೆಲವರು ಮುಸ್ಲಿಮರ ದಾಳಿಯಲ್ಲಿ ಶೈವರು ತಮ್ಮ ದೇವಾಲಯಗಳನ್ನು ರಕ್ಷಿಸಿಕೊಂಡಿದ್ದರು ಆದರೆ ವೈಷ್ಣವರು ತಮ್ಮ ದೇವಾಲಯಗಳನ್ನು ರಕ್ಷಿಸಿಕೊಳ್ಳಲಿಲ್ಲ ಎಂಬ ಅಭಿಪ್ರಾಯಗಳು ಕೇಳಿ ಬರುತ್ತಿವೆ.

ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

## ಕವಿ ಮನಸು

### ಸೋದರ ಮಾವ ??...

ಮದುವೆಯಾಗುತ್ತೇನೆ ಮಾವ ನಿನ್ನ ನೆಚ್ಚಿ
ಚೊಕ್ಕ ಮಾತು ಹೇಳುತ್ತೇನೆ ಹೃದಯ ಬಿಚ್ಚಿ.
ಕಾಡಬೇಡ ಮಾವ ನಿನಗೆ ಕೈಯ ಮುಗಿತೀನಿ
ಈ ಜೀವ ನಿನಗಾಗಿ ಮೀಸಲು ಇಟ್ಟಿನಿ...1

ಶಾಲಿಬಾಳ ಕಲ್ತಿದೆವ್ವ ವಲ್ಲೆ ಅಂತೀನಿ
ನೌಕರಿ ಮಾಡಾಕತ್ತಿ ದೆವ್ವ ಬೇಡ ಅಂತೀನಿ
ಹೂ ಅಂದರೆ ಬಾಗಿಲ ಮುಂದೆ ವರಗಳು ಬರುತ್ತಾವ.
ತಿಂಗಳು ಸಂಬಳ ತರುವ ಹುಡುಗರು ಕೈಯ ಹಿಡಿತಾವು......2

ಹೆಗಲ ಮೇಲೆ ಎತ್ತಿಕೊಂಡು ಆಟ ಆಡಿಸಿದಿ
ಅಂಗಳದಾಗ ನಿಲ್ಲಿಸಿ ಅಂಗಿ ತೊಡಸಿದಿ.
ಬಾಳೆಹಣ್ಣು ಸುಲಿದು ನನ್ನ ಬಾಯಾಗಿಟ್ಟಿದ್ದಿ
ಮಲ್ಲಿಗೆ ಹೂವ ಜಡೆಗೆ ಮೂಡಿಸಿ ಮುತ್ತ ಕೊಟ್ಟಿದ್ದಿ.....3

ಫ್ಯಾಶನ್ ಕಾಲ ಹೆಚ್ಚಾಗಿದೆ ತಿಳಿದು ನೋಡಮ
ಕೂಡಿ ಹೋದರೆ ಜೋಡಿ ಎಂದು ತಿಳಿಯಬೇಕಮ್ಮ.
ಕಾರಿನಲ್ಲಿ ನೀವು ಮೇರಿಯ ಬೇಕಮ್ಮ
ಸುಖ ಸಂಸಾರವನ್ನು ನಡೆಸಬೇಕಮ್ಮ......4

ನಾನು ನೀನು ಜೋಡಿಯಾಗಿ ಜೀವನ ಕಳೆಯೋಣ್
ನನ್ನ ನಿನ್ನ ಹಣೆಯ ಬರಹ ಬ್ರಹ್ಮ ಬರೆದಾನ
ತಂದೆ ತಾಯಿಯ ಪ್ರೀತಿಲಿಂದ ಜೋಪಾನ ಮಾಡೋಣ....5

– ಎಸ್.ಎಸ್. ಮುದ್ಲಾಪುರ ಕೊಪ್ಪಳ

### ಸಜ್ಜನರ ಒಡನಾಟ

ಬದುಕೊಂದು ಏಳು ಬೀಳಿನ ಆಟ
ಇರಲಿ ಸಜ್ಜನರ ಒಡನಾಟ
ಬೀರೋಣ ಅಕ್ಕರೆಯ ನೋಟ
ಸ್ನೇಹಿತರೊಂದಿಗೆ ಮಾಡೋಣ ಊಟ

ಸಜ್ಜನರ ಹಾದಿಯಲ್ಲಿ ನಡೆಯೋಣ
ದುರ್ಜನರ ಸಂಗದಿಂದ ದೂರವಿರೋಣ
ಸಜ್ಜನರ ಒಡನಾಟ ಹೆಜ್ಜೇನು ಸವಿದಂತೆ
ದುಂಬಿಯು ಹೂವಿನಿಂದ ಹೀರುವ ಮಕರಂದದಂತೆ

ಸಜ್ಜನರ ಜೊತೆಯಿರೆ ಶ್ರೀಗಂಧದ ಪರಿಮಳ
ದುರ್ಜನರ ಸಂಗದಿಂದ ಬಾಳೆಲ್ಲಾ ತಳಮಳ
ಸದ್ವಿಚಾರದತ್ತ ಹರಿಸೋಣ ನಮ್ಮಯ ಚಿತ್ತ
ಭಗವಂತನ ರಕ್ಷಿಸುವನು ಈ ಜಗತ್ತ

– ಚೇತನ ಭಾರ್ಗವ ಬೆಂಗಳೂರು

### ಮಧುರ ಮೈತ್ರಿ

ಕವಿ ಮತ್ತು ಲೇಖನಿಯ ಮಧುರ ಮೈತ್ರಿ
ಭಾವನೆಗಳ ಲೋಕದಲ್ಲಿ ಪಯಣ ಖಾತ್ರಿ.
ನನ್ನ ಅರಸ ಕವಿಯು ಮಾಡುವ ಅಣತಿ
ಅದರಂತೆ ನಡೆದು ಬರಹವ ಬೆಳಗುವ ಪ್ರಣತಿ.

ಕವಿಯ ಕೈಯಲ್ಲಿ ನಾ ದೋಣಿಯ ಹುಟ್ಟಿನಂತೆ
ಬರೆದಷ್ಟು ಕಲ್ಪನೆಯ ಸಾಗರದಲ್ಲಿ ಮುಂದೆ ಸಾಗುವಂತೆ.
ಜೊತೆಯಲ್ಲಿ ನಾ ಇಲ್ಲದಿದ್ದರೆ ಪದಗಳು ಕಟ್ಟಲಾಗದು
ನಮ್ಮಿಬ್ಬರ ಈ ಮಧುರ ಮೈತ್ರಿ ಮುಗಿಲಿಗಿಂತ ಮಿಗಿಲಾದದ್ದು.

ಕವಿಯ ಮನದ ಮಾತನ್ನು ಅರಿಯುವೆ ಮುನ್ನವೇ
ಆತನ ಬೆರಳುಗಳು ಕರೆದಂತೆ ಜೊತೆಗೆ ಸಾಗುವೆ.
ಹೆಸರಿಡಲಾಗದು ನಮ್ಮ ನಡುವಿನ ಬಾಂಧವ್ಯಕ್ಕೆ
ನಮ್ಮ ಸ್ನೇಹ ಚಿರಂಜೀವಿ ಚಿರಕಾಲಕ್ಕೆ.

– ಮಂಜುಶ್ರೀ ಮುರಳೀಧರ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಪರಿಶ್ರಮ



ಸುರೇಶ ಮತ್ತು ರಮೇಶ ಎಂಬ ಎರಡು ಹುಡುಗರು ಹುಟ್ಟಿದ್ದು ಬೆಳದಿದ್ದು ಓದಿದ್ದೂ ಒಟ್ಟೊಟ್ಟಿಗೆ, ಒಂದೆ ತರಗತಿಯ ವಿದ್ಯಾರ್ಥಿಗಳಾಗಿದ್ದ ಇವರಿಬ್ಬರ ಅಭಿರುಚಿಗಳು ಮತ್ತು ಆಸಕ್ತಿಗಳು ಮಾತ್ರ ಒಂದೇ ಆಗರಿಲಿಲ್ಲ! ಒಂದೇ ತರಗತಿಯಲ್ಲಿ ಓದುತ್ತಿದ್ದರೂ ಸುರೇಶನಿಗೆ ಓದಿನಲ್ಲಿ ಹೆಚ್ಚು ಹೆಚ್ಚು ಆಸಕ್ತಿ ಇದ್ದು ಅವನ ತರಗತಿಯಲ್ಲಿ ಯಾವಾಗಲೂ ಪ್ರಥಮ ಸ್ಥಾನ ಪಡೆಯುತ್ತಾ ಮುಂದಿನ ತರಗತಿಗೆ ತೇರ್ಗಡೆಯಾಗುತ್ತಿದ್ದ. ರಮೇಶ ಮಾತ್ರ ಶಾಲಾ ಪಠ್ಯದಲ್ಲಿ ಅಷ್ಟೊಂದು ಚುರುಕಿಲ್ಲದಿದ್ದರೂ ಪಠ್ಯೇತರ ಚಟುವಟಿಕೆಗಳಾದ ಆಟಗಳು, ಕರಕುಶಲ ವಸ್ತುಗಳನ್ನು ಮಾಡುವುದರಲ್ಲಿ, ಶಾಲೆಯ ಕೈತೋಟದ ನಿರ್ವಹಣೆಯಲ್ಲಿ, ಮಕ್ಕಳನ್ನು ಸಂಘಟಿಸುವಲ್ಲಿ ಯಾವಾಗಲೂ ಮೊದಲಿಗನಾಗಿರುತ್ತಿದ್ದ.

ಇನ್ನೇನು ವಾರ್ಷಿಕ ಪರೀಕ್ಷೆಗಳು ಸಮೀಪಿಸುತ್ತಿದ್ದವು ಮುಖ್ಯ ಗುರುಗಳು ಎಲ್ಲಾ ಮಕ್ಕಳನ್ನು ಕರೆದು ಪ್ರತಿಯೊಬ್ಬರೂ ಶ್ರದ್ದೆಯಿಂದ ಪ್ರತಿನಿತ್ಯ ತಪ್ಪದೇ ಅಭ್ಯಾಸ ಮಾಡಬೇಕು, ನನಗೆಲ್ಲ ಬರುತ್ತದೆ ಎಂದು ಮೈ ಮರೆಯಬಾರದು, ಪರೀಕ್ಷೆಯಲ್ಲಿ ಅಂಕಗಳು ಹೆಚ್ಚು ಕಡುಮೆ ಬರುವುದು ಸಹಜ ಆದರೆ ನಮ್ಮ ಪ್ರಯತ್ನವನ್ನು ಎಂದಿಗೂ ಬಿಡಬಾರದು ಎನ್ನುತ್ತಾ, ನಮ್ಮ ಪ್ರಯತ್ನಕ್ಕೆ ನಾವು ಮಾಡುವ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂದು ಮಕ್ಕಳನ್ನು ಪರೀಕ್ಷೆಯ ದೃಷ್ಠಿಯಿಂದ ಪ್ರೇರೇಪಿಸಿದರು.

ಎಂದಿನಂತೆ ವಾರ್ಷಿಕ ಪರೀಕ್ಷೆಯನ್ನು ಎಲ್ಲಾ ಮಕ್ಕಳು ಉತ್ಸಾಹದಿಂದ ಬರೆದು ಮುಗಿಸಿದರು ಹಾಗೆಯೇ ಪಲಿತಾಂಶವೂ ಬಂದಿತು. ಮೊದಲೇ ಎಲ್ಲರ ನಿರೀಕ್ಷೆಯಂತೆ ಸುರೇಶ ತನ್ನ ಶಾಲೆಯಲ್ಲಿ ಅಷ್ಟೇ ಅಲ್ಲದೆ, ಅವನು ಪರೀಕ್ಷೆ ಬರೆದ ಪರೀಕ್ಷಾ ಕೇಂದ್ರಕ್ಕೆ ಪ್ರಥಮನಾಗಿ ಅತಿ ಹೆಚ್ಚು ಅಂಕಗಳೊಂದಿಗೆ ತೇರ್ಗಡೆಯಾಗಿದ್ದನು. ಇತ್ತಾ ರಮೇಶನು ಸಹ ಸಾಧಾರಣ ಅಂಕಗಳೊಂದಿಗೆ ತೇರ್ಗಡೆಯಾಗಿ ಸಂತೋಷದಿಂದ ಬೀಗುತ್ತಿದ್ದನು. ಉನ್ನತ ವ್ಯಾಸಂಗಕ್ಕೆಂದು ಸುರೇಶ ಪಟ್ಟಣಕ್ಕೆ ಹೊರಟು ನಿಂತನು, ಆತ್ಮೀಯ ಗೆಳೆಯನಾದ ರಮೇಶ ಸುರೇಶನನ್ನು ಕುರಿತು ಶುಭವಾಗಲಿ ಗೆಳೆಯ ನಿನ್ನ ಪ್ರಯತ್ನ ಹೀಗೆ ಸಾಗಲಿ, ಯಾವತ್ತೂ ನಿನ್ನ ಪ್ರಯತ್ನವನ್ನು ಬಿಡಬೇಡ ಎಲ್ಲವೂ ನಿನ್ನಿಷ್ಟದಂತೆ ಆಗಲಿ ಎಂದು ಹರಿಸಿದನು.

ಪ್ರತಿಯಾಗಿ ಸುರೇಶನು ಸಹ ಗೆಳೆಯ ರಮೇಶನಿಗೆ ನೀನು ಸಹ ಸ್ವಲ್ಪ ಚನ್ನಾಗಿ ಓದಿದ್ದರೆ ನನ್ನ ಜೊತೆಯಲ್ಲೆ ಪಟ್ಟಣಕ್ಕೆ ಬರಬಹುದಿತ್ತು ಆದರೆ ನಿನ್ನ ಆಸಕ್ತಿ ಬೇರೆ ನೀನಿನ್ನೂ ಹಳೆಯ ವ್ಯವಸ್ಥೆಗೆ ಅಂಟಿಕೊಂಡು ಇರುವುದರಲ್ಲೇ ಸಂತೋಷವಾಗಿರಲು ಪ್ರಯತ್ನ ಮಾಡುತ್ತಿದ್ದೀಯ, ನೀನು ಆಯ್ಕೆ ಮಾಡಿಕೊಂಡಿರುವ ಕೆಲಸ ಪ್ರತಿನಿತ್ಯ ನಿನ್ನ ಪ್ರಯತ್ನವನ್ನು ಬಯಸುತ್ತದೆ ಆದರೂ ಈ ಕೃಷಿ ಕೆಲಸಕ್ಕೆಲ್ಲ ಭವಿಷ್ಯವಿರುತ್ತದೆ ಎಂದು ನನಗೆ ಅನಿಸುವುದಿಲ್ಲ ಮತ್ತೊಮ್ಮೆ ಯೋಚಿಸಿ ನಿರ್ಧರಿಸು ಎಂದು ಹೇಳಿ ಹೊರಡುತ್ತಾನೆ.

ಅತ್ತ ಕಷ್ಟ ಪಟ್ಟು ಓದಿ ದೊಡ್ಡ ಕಂಪನಿಯಲ್ಲಿ ಸುರೇಶನಿಗೆ ಕೆಲಸ ಸಿಗುತ್ತದೆ, ಇತ್ತಾ ರಮೇಶ ತನ್ನ ಹಿರಿಯರಿಂದ ಬಳುವಳಿಯಾಗಿ ಬಂದಂತಹ ಜಮೀನಿನಲ್ಲಿ ಎಲ್ಲಾ ರೀತಿಯ ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನು ಬಳಸಿಕೊಂಡು ಬಹುವಿಧವಾದ ಹಲವಾರು ವಾಣಿಜ್ಯ ಬೆಳೆಗಳಾದ ಮಾವು, ತೆಂಗು, ಸೀಬೆ, ಪೇರಲ, ದ್ರಾಕ್ಷಿ, ದಾಳಿಂಬೆ, ನಿಂಬೆ ಮುಂತಾದವುಗಳ ಜೊತೆ ಸಾಮಾನ್ಯ ಬೆಳೆಗಳಾದ ಜೋಳ, ರಾಗಿ, ಭತ್ತ ಜೊತೆಗೆ ಎಣ್ಣೆ ಕಾಳುಗಳಾದ ಶೇಂಗ ಮತ್ತು ಸೂರ್ಯಕಾಂತಿಯನ್ನು ಮಿಶ್ರ ಬೆಳೆ ಪದ್ದತಿಯಲ್ಲಿ ಬೆಳೆಯಲು ಪ್ರಾಂಭಿಸಿದ. ತುರ್ತು ಆದಾಯಕ್ಕ ಮೂಲವಾಗಲಿ ಎಂದು ಹತ್ತು ಅಧಿಕ ಹಾಲು ನೀಡುವಂತಹ ಆಕಳುಗಳು, ಆರು ದೇಶಿಯ ಆಕಳುಗಳು ಜೊತೆಗೆ ನಾಲ್ಕು ಎಮ್ಮೆಗಳನ್ನು ಸಾಕಿದನು. ಗುಡ್ಡದ ಮೇಲಿಂದ ಮಳೆಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ಝುರಿಯ ರೂಪದಲ್ಲಿ ಹರಿದು ಬರುತ್ತಿದ್ದ ಹಳ್ಳಕ್ಕೆ ದೊಡ್ಡದಾದ ಹೊಂಡವನ್ನು ಸರಕಾರಿ ಅನುದಾನದಲ್ಲಿ ನಿರ್ಮಿಸಿಕೊಂಡು ಅದರಲ್ಲಿ ಅನೇಕ ಬಗೆಯ ಮೀನುಗಳ ಪಾಲನೆಯನ್ನೂ ಆರಂಭಿಸುತ್ತಾನೆ, ಈ ಮೀನುಗಳಿಗೆ ಬೇಕಾದ ಆಹಾರವನ್ನು ಅವನದೇ ಸಣ್ಣ ಪ್ರಮಾಣದ ಶುದ್ದ ಎಣ್ಣೆ ತೆಗೆಯುವ ಗಾಣದಿಂದ ಬಂದಂತಹ ಚರಟವನ್ನು ಉಪಯೋಗಿಸುವುದರ ಮೂಲಕ ಆರ್ಥಿಕ ಜಾಣ್ಮೆಯನ್ನು ಮೆರೆದಿದ್ದ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಇವೆಲ್ಲವುಗಳ ಜೊತೆಯಲ್ಲಿ ಈ ಎಲ್ಲಾ ರಾಸುಗಳಿಂದ ಬರುತ್ತಿದ್ದ ಸಗಣಿ ಮತ್ತು ತೋಟದಲ್ಲಿನ ಅನುಪಯುಕ್ತ ತರಗಲನ್ನು ಬಳಸಿಕೊಂಡು ಒಂದು ದೊಡ್ಡ ಬಯೋ ಗ್ಯಾಸ್ ಘಟಕವನ್ನೂ ಕೇಂದ್ರ ಸರಕಾರದ ಸಹಾಯದಲ್ಲಿ ನಿರ್ಮಿಸಿಕೊಂಡು, ತನ್ನ ಮನೆಗಾಗುವಷ್ಟು ಉರುವಲು ಅನಿಲದ ವ್ಯವಸ್ಥೆ ಮಾಡಿಕೊಂಡು, ಹೆಚ್ಚಿಗೆ ಉತ್ಪತ್ತಿಯಾದ ಅನಿಲವನ್ನು ಪಕ್ಕದ ಎರಡು ಮನೆಗಳಿಗೆ ಮಾಸಿಕ ಲೆಕ್ಕದಲ್ಲಿ ಹಣಕ್ಕಾಗಿ ನೀಡುತ್ತಿದ್ದನು. ಹಾಗೆಯೇ ಅವನ ಬಯೋಗ್ಯಾಸ್ ಘಟಕದಿಂದ ಬಂದ ಗೊಬ್ಬರವನ್ನು ಅದರ ಜೊತೆ ಇನ್ನೊಷ್ಟು ಅನುಪಯುಕ್ತ ತೋಟದಲ್ಲಿನ ಕಸವನ್ನು ಸೇರಿಸಿ ಸಣ್ಣದಾಗಿ 3*8 ರ ನಾಲ್ಕು ತೊಟ್ಟಿಗಳನ್ನು ಮಾಡಿ ಅದರಲ್ಲಿ ಎರೆಹುಳುಗಳನ್ನು ಸಾಕಿ ಅದರಿಂದ ಬಂದ ಎರೆಹುಳು ಕಾಂಪೋಷ್ಟು ಗೊಬ್ಬರವನ್ನು ಮೂರು ತಿಂಗಳಿಗೊಮ್ಮೆ ಸುಮಾರು 12 ಕ್ವಿಂಟಾಲ್ ನ್ನು 2000*12=24000 ಸಾವಿರ ರೂಪಾಯಿಗಳಿಗೆ ನಗರದ ಹೊರವಲಯದಲ್ಲಿದ್ದ ಹೊಸ ತಳಿ ಮತ್ತು ಬೀಜೊತ್ಪಾಧನೆ ಕಂಪನಿಗೆ ನೀಡಲು ಆ ಕಂಪನಿಯೊಂದಿಗೆ ಮುಂದಿನ ಹತ್ತು ವರ್ಷಗಳವರಿಗಿನ ಒಪ್ಪಂದಕ್ಕೆ ಸಹಿ ಮಾಡಿಕೊಂಡಿದ್ದ. ರಮೇಶ ಪ್ರತಿ ವರ್ಷ ನಡೆಯುತ್ತಿದ್ದ ಸಾವಯವ ಕೃಷಿ ಸಮ್ಮೇಳನದಲ್ಲಿ ಪ್ರಗತಿಪರ ರೈತನಾಗಿ ಬಾಗವಹಿಸುತ್ತಿದ್ದವನು, ಈ ವರ್ಷದ ಸಾವಯವ ಕೃಷಿ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವಂತೆ ಮಾನ್ಯೆ ಜಿಲ್ಲಾಧಿಕಾರಿಗಳಿಂದ ಆಮಂತ್ರಣ ಬಂದಿರುವುದು ರಮೇಶನ ಸಂತೋಷವನ್ನು ಇಮ್ಮಡಿ ಗೊಳಿಸಿತ್ತು.

ಬೃಹತ್ ಬೆಂಗಳೂರಿನಲ್ಲಿ ಹತ್ತು ಹಂತಿಸ್ಥಿನ ಅರಮನೆಯಂತಹ ಮನೆಯಲ್ಲಿ ವಾತಾನುಕೂಲಿಯೊಂದಿಗೆ ಸುರೇಶನ ಕೆಲಸವೂ ಸಾಗಿತ್ತು. ಇಬ್ಬರಿಗೂ ಮದುವೆ ನಂತರ ಮಕ್ಕಳಾದವು. ಅತ್ತ ಇರುವುದರಲ್ಲೆ ರಮೇಶ ಹೊಲ ಮನೆ ದನ ಕರುಗಳೆಂದುಕೊಂಡು ಮಡದಿ ಮಕ್ಕಳೊಂದಿಗೆ ನಿತ್ಯ ತನ್ನ ಕೃಷಿ ಕಾಯಕವನ್ನು ಮುಂದುವರಿಸಿದ್ದ. ಹತ್ತನೇ ತರಗತಿಯ ನಂತರ ವಿಜ್ಞಾನ ವಿಷಯದಲ್ಲಿ ಮುಂದುವರಿದು, ಬಯೋಟೆಕ್ನಾಲಜಿ ಆಯ್ದುಕೊಂಡಿದ್ದ ಸುರೇಶನಿಗೆ ಅವನಂದುಕೊಂಡಂತೆ ಜೀವವೈವಿದ್ಯತೆಯಲ್ಲಿ ಅಹಾರದ ಮಹತ್ವ ಮತ್ತು ವಿವಿಧ ಸಂಕೀರ್ಣ ಆಹಾರ ಸಂಬಂಧಿತ ಹೊಸ ಹೊಸ ತಳಿಗಳನ್ನು ಕಂಡುಹಿಡಿಯುವ ಸಸ್ಯ ವಿಜ್ಞಾನಿಯ ಕೆಲಸ ಕೈತುಂಬಾ ಹಣ ಬರುತ್ತಿದ್ದರೂ ಏಕೋ ಪ್ರತೀ ದಿನದ 24 ನಾಲ್ಕೂ ಗಂಟೆಯಾ ಕೆಲಸ ಅವನನ್ನು ಹಿಂಡಿ ಹಿಪ್ಪೆ ಮಾಡಿ ಬಿಟ್ಟಿತ್ತು. ಇತ್ತ ಮನೆಯಲ್ಲೂ ನೆಮ್ಮದಿಯಿಲ್ಲ ಅತ್ತ ಆಫೀಸ್ ನಲ್ಲೂ ಅದೇ ಗೋಳು, ಸಾಕಾಗಿ ಹೋಗಿದ್ದ ಸುರೇಶ ವಾಲೇಂಟ್ರಿ ನಿವೃತ್ತಿಯನ್ನು ತೆಗೆದುಕೊಳ್ಳೊ ಹಂತಕ್ಕೆ ಬಂದು ನಿಂತಿದ್ದ.

ಆದರೆ ಏನು ಮಾಡುವುದು ಬೆಂಗಳೂರಿನ ತಾನಿರುವ ಪ್ಲಾಟ್ ನ ಮಾಸಿಕ ಕಂತು ಕಟ್ಟುವುದು...? ಮಗನ ಶಾಲೆಯ ಮಾಸಿಕ ಫೀಜೇ ನಲವತ್ತು ಸಾವಿರಗಳು, ಜಿಮ್, ಸ್ವಿಮ್ಮಿಂಗ್, ಆರ್ಟ್ ಕ್ಲಾಸ್ ಮತ್ತು ಅಬಾಕಸ್ ಸೇರಿದಂತೆ ಒಟ್ಟು ಹತ್ತಿಪ್ಪತ್ತು ಸಾವಿರಗಳು...! ಇನ್ನೂ ಮನೆಯ ರೇಷನ್, ಹಾಲು, ಹಣ್ಣು ಹಂಪಲುಗಳು, ಕಾರಿನ ಪೆಟ್ರೋಲ್ ಜೊತೆಗೆ ಮಾಸಿಕ ಇನ್ಸೂರೆನ್ಸ್ ನ ಕಂತುಗಳು...! ಇವೆಲ್ಲವುಗಳನ್ನು ನೆನಸಿಕೊಂಡರೆ ಸಾಕು, ಆಫೀಸ್ ನ ಒತ್ತಡವೇ ಒಂದು ಹಂತಕ್ಕೆ ಉತ್ತಮ ಅನಿಸಿದ್ದೂ ಸುಳ್ಳಲ್ಲ. ಕರ್ಚೀಫ್ ನಿಂದ ಹಣೆಯನ್ನು ಒರಸಿಕೊಳ್ಳುತ್ತಾ ಅವನ ಬಾಸ್ ನ ಪೋನಿಗೆ ಪ್ರತಿಕ್ರಿಯುಸುತ್ತ ಆಗಲಿ ಸರ್ ಆದಷ್ಟು ಬೇಗ ಅಂತಹ ತಳಿಯೊಂದನ್ನು ನಿಮ್ಮ ಕೈಗಿಡುತ್ತೇನೆ ಎನ್ನುತ್ತ ಮೊಬೈಲ್ ನ್ನು ಟೇಬಲ್ ಗೆ ಕುಕ್ಕಿದವನೆ ಆಆ.......... ಎಂದು ಹಣೆಯನ್ನು ಚಚ್ಚಿಕೊಂಡ.

ಕಾರ್ಪೂರೇಟ್ ಜಗತ್ತು ಸುರೇಶನನ್ನು ನಿಜವಾದ ಪರೀಕ್ಷೆಗೆ ಒಡ್ಡಿತ್ತು ಪ್ರತಿ ನಿತ್ಯ ಪ್ರತಿ ಕ್ಷಣ ಅಲ್ಲಿ ಹೋರಾಟವೆ ಬದುಕಾಗಿತ್ತು, ಒಮ್ಮೆ ಕಲಿತೊ ಒಪ್ಪಿಸಿಯೋ ಬಿಡುವಂತಾಗಿದ್ದಲ್ಲ, ಈ ಜೀವನದಲ್ಲಿ ಕೇವಲ ಕಂಟಪಾಠ ಮಾಡಿ ಕಲಿಯುವುದಕ್ಕೂ ನಿಜವಾಗಿ ವಿಷಯದ ಆಳಕ್ಕೆ ಇಳಿದು ತಿಳಿದುಕೊಳ್ಳುವುದಕ್ಕು ಬಹಳ ವ್ಯತ್ಯಾಸ ಇದೆ ಎನ್ನುವುದು ಅವನಿಗೆ ಸ್ಪಷ್ಟವಾಗಿತ್ತು. ಕಂಪನಿಯ ಟಾರ್ಗೆಟ್ ಗಳು ಸಂಶೋಧನಾ ವರದಿಗಳು, ಟ್ರಾಪಿಕ್, ಪೊಲೂಶನ್ ಎಲ್ಲಾ ಸೇರಿಕೊಂಡು ಬೆಂಗಳೂರಿನ ಜೀವನ ಸುರೇಶನಿಗೆ ಸಾಕು ಸಾಕು ಎನ್ನುವಂತಾಗಿತ್ತು.

ಅಕಸ್ಮಿಕವಾಗಿ ಸಮಾರಂಭ ಒಂದರಲ್ಲಿ ಸುರೇಶನು ಮುಖ್ಯ ಅತಿಥಿಗಳನ್ನಾಗಿ ರಮೇಶನನ್ನು ಕಂಡು ಪರಮಾಶ್ಚರ್ಯ ಗೊಳ್ಳುತ್ತಾನೆ ಅರೆ ಇವನು ನಮ್ಮ ರಮೇಶ..! ಈ ದಿನದ ಸಮಾರಂಭದ ಮುಖ್ಯ ಅತಿಥಿ...! ಇರಲಿ ಆ ನಂತರ ಮಾತನಾಡಿಸೋಣ ಎನ್ನುವಷ್ಟರಲ್ಲಿ ಆಯೋಜಕರು ರಮೇಶನನ್ನು ಮಾತನಾಡಲು ವೇದಿಕೆಗೆ ಕರೆದರು.

ಪ್ರೀತಿಯ ರೈತ ಮಿತ್ರರೆ, ಅನ್ನದಾತರೆ, ಕರ್ಮಯೋಗಿಗಳೆ, ತಳಿ ರಕ್ಷಕರೆ, ಅಮರ ಯೋಗಿಗಳೆ ಮಣ್ಣನ್ನೆ ನಂಬಿ ಬದುಕುತ್ತಿರುವ ಆತ್ಮೀಯ ಬಂದುಗಳೆ ಮಣ್ಣಿನಿಂದ ಅನ್ನ, ಅನ್ನದಿಂದ ಜೀವ, ಜೀವದಿಂದ ದೈವ, ದೈವದಿಂದ ಮೋಕ್ಷ ಮತ್ತು ಮಾನವತೆಯ ಉಳಿವು ಅಳಿವು ನಿಂತಿರುವುದು. ನೆಲ ನೀರು ಅಗ್ನಿ ವಾಯು ಈ ಬಯಲು ಆಕಾಶವೆ ಸತ್ಯ ಇದರ ಹೊರತಾಗಿ ನಾನೇನಾದರು ಮಾಡಬಲ್ಲೆ ಎನ್ನುವುದು ಸಾಧ್ಯವಿಲ್ಲ ಹಾಗಾಗಿ ಇವೆಲ್ಲವುಗಳೊಳಗೂಡಿ ನಾವು ಬದುಕೋಣ ಮತ್ತು ನಮ್ಮ ನೆರೆಹೊರೆಯ ಇತರೆ ಪಶು ಪಕ್ಷಿಗಳಾದಿಯಾಗಿ, ಜೀವ ಜಂತುಗಳ ಜೊತೆಯಲ್ಲಿ ಜೀವಿಸೋಣ, ಮಾನವನಿಗೆ ಅಗತ್ಯ ಮತ್ತು ಅವಶ್ಯಕವಾಗಿ ಬೇಕಾಗಿದ್ದನ್ನೆಲ್ಲ ಈ ಪ್ರಕೃತಿ ನೀಡಿದೆ, ನಾವೀಗ ಪ್ರಕೃತಿ ಮಾತಿಗೆ ತಲೆಬಾಗಿ, ಜೊತೆಯಾಗಿ ಬದುಕಬೇಕಾಗಿದೆ.

ಹೊಸ ಹೊಸ ಜೈವಿಕ ಆವಿಷ್ಕಾರಗಳು ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವುದು ಒಳ್ಳೆಯದೆ ಆದರೆ ಹೆಚ್ಚು ಹೆಚ್ಚು ಬೆಳೆಯುವ ಉತ್ಸಾಹದಲ್ಲಿ ನೆಲ ನೀರು ಗಾಳಿ ಕಲುಷಿತವಾಗದಂತೆ ಎಚ್ಚರ ವಹಿಸಬೇಕು. ಸೂಕ್ಷ್ಮ ಜೀವಿಗಳು, ಪಶು ಪಕ್ಷಿ ಪ್ರಾಣಿಯಾದಿಯಾಗಿ ಸಹಕಾರ ಸಹಬಾಳ್ವೆ ಸಮಾನತೆ ಮತ್ತು ಸಮಷ್ಠಿ ಹಿತ ತತ್ವದಲ್ಲಿ ನಾವೆಲ್ಲರೂ ಬದುಕಬೇಕು ಇತರರನ್ನೂ ಬದುಕಗೊಡಬೇಕು ಎನ್ನುತ್ತ ಇತ್ತೀಚಿನ ಹದಿನೈದು ವರ್ಷದಲ್ಲಿ ನಿರಂತರ ಸಂಶೋಧನೆಯ ಫಲವಾಗಿ ಯಾವುದೇ ರಾಸಾನಿಕ ಗೊಬ್ಬರ, ಔಷಧಿಗಳಲ್ಲಿದೆ ಕಡಮೆ ನೀರು ಮತ್ತು ಸ್ಥಳಾವಕಾಶದಲ್ಲಿ ಬೆಳೆದ ಕೆಲವು ದೈನಂದಿನ ಬಳಕೆಯ ಹಸಿರು ಸೊಪ್ಪುಗಳ ಮೊಳಕೆ ಹಂತದಲ್ಲಿನ "ಪ್ರೋಬಯಾಟಿಕ್ಸ್ ಗಳು" ನಿಜವಾದ ಶಕ್ತಿ ಸಂಚಯಗಳು ಎನ್ನುವುದು ದೃಡೀಕರಿಸುವ ಹಂತದಲ್ಲಿ ಇದೆ. ಅದರಂತೆ ಪ್ರತಿಯೊಬ್ಬ ರೈತರೂ ಸೂಕ್ಷ್ಮವಾದ ಪ್ರಕೃತಿ ಮತ್ತು ಜೀವಿಗಳ ನಡುವಿನ ಸೂಕ್ಷ್ಮವಾದ ಸಂವೇದನೆಯನ್ನು ಗ್ರಹಿಸಬೇಕು ಮತ್ತು ಅಂತಹ ಸಂಭಂದದ ಅನುಭವದ ಅನುಬೂತಿಯನ್ನು ಹೊಂದಬೇಕು ಎನ್ನುತ್ತ, ಇನ್ನೊಷ್ಟು ತಾಂತ್ರಿಕತೆಯ ಜ್ಞಾನದ ಸಹಕಾರ ಬೇಕಾಗಿದೆ ಎಂದು ತನ್ನ ಮಾತನ್ನು ಮುಗಿಸಿದರು. ಜನರ ಕರತಾಡನಗಳ ಮಧ್ಯ ರಮೇಶ ವೇದಿಕೆಯಿಂದ ಕೆಳಗಿಳಿದು ನೆಡೆದಿದ್ದು ಸುರೇಶನಿಗೆ ಗೊತ್ತೇ ಆಗಲಿಲ್ಲ.

ವಿಶೇಷ ಎಂದರೆ ಸುರೇಶ್ ಕೆಲಸ ಮಾಡುತ್ತಿದ್ದ ಕಂಪನಿಯು ಆ ದಿನ ಸುರೇಶನನ್ನು ಸಾವಯವ ಕೃಷಿ ಸಮ್ಮೇಳನದ ವಿಶೇಷ ವೀಕ್ಷಕನ್ನನ್ನಾಗಿ ತನ್ನ ಕಂಪನಿಯ ಪರವಾಗಿ ಕಳುಹಿಸಿರುತ್ತದೆ!

ಯಾವ ಕೆಲಸವು ಕೀಳಲ್ಲ ಎನ್ನುವ ಸತ್ಯ ಸುರೇಶನಿಗೆ ಅಂದು ಅರಿವಾಗಿತ್ತು, ನಿತ್ಯ ನಿರಂತರ ಪ್ರಯತ್ನದ ಫಲ ರಮೇಶನ ಕೈಹಿಡಿದಿತ್ತು, ಅದು ಸುರೇಶನ ಕಣ್ಣನ್ನು ತೆರೆಸಿದ್ದು ಸುಳ್ಳಲ್ಲ. ಸುರೇಶನ ಮಾರನೇ ದಿನವೇ ತಾನು ಕೆಲಸ ಮಾಡುತ್ತಿದ್ದ ಕಂಪನಿಯ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ನೇರವಾಗಿ ತಾನು ಬೆಳೆದ ಹಳ್ಳಿಗೆ ಹಿಂದಿರುಗಿ ಬಂದು "ಪ್ರೋಬಯಾಟಿಕ್ಸ್ ಫಾರ್ ಮ್ಯಾನ್ ಕೈಂಡ್" ಕಂಪನಿಯನ್ನು ಹುಟ್ಟು ಹಾಕಿದ, ತನ್ನ ಸ್ನೇಹಿತ ಪ್ರಗತಿಪರ ರೈತ ಎನಿಸಿಕೊಂಡಿದ್ದಂತಹ ರಮೇಶನನ್ನೇ ಅದರ ಸಂಸ್ಥಾಪಕನನ್ನಾಗಿ ನೇಮಕ ಮಾಡಿ ತಾನು ಆ ಕಂಪನಿಯ ನಿರ್ದೇಶಕನಾಗಿ ಮುಂದುವರಿಯುತ್ತಾನೆ.

"ನಹಿ ಜ್ಞಾನೇನ ಸದೃಶಂ" ಎಷ್ಟು ಸತ್ಯವೋ "ಕಾಯಕವೇ ಕೈಲಾಸ" ಎನ್ನುವುದೂ ಅಷ್ಟೇ ಸತ್ಯವಾದ ಮಾತು, ನಿತ್ಯ ನಿರಂತರವಾದ ನಿನ್ನ ಪರಿಶ್ರಮ ಮಾತ್ರ ನಿನ್ನನ್ನು ಯಾವತ್ತೂ ಕಾಯುವ ಕೈವಲಗ ಎನ್ನುವುದು ಸುರೇಶನ ಅರಿವಿಗೆ ಬಂದಿತ್ತು.

## ಹವಾಮಾನ ಆಧಾರಿತ ಬೆಳೆ ವಿಮೆ ನೋಂದಣೆ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಪ್ರಸ್ತಕ ಸಾಲಿಗೆ ಮುಂಗಾರು ಹಂಗಾಮು ಅವಧಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ(RWBCIS)ಗ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಹ ರೈತರು ತಮ್ಮ ಬೆಳೆಗಳ ವಿಮೆಗೆ ನೋಂದಾಯಿಸಿ ಕೊಳ್ಳಬಹುದು ಎಂದು ಜಿಪಂ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ ಸಪ್ಪಂಡಿ ಅವರು ತಿಳಿಸಿದ್ದಾರೆ.

ಪ್ರಕೃತಿ ವಿಕೋಪಗಳು, ಹವಾಮಾನ ವೈಪರೀತ್ಯಗಳಾದ ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ, ಆಲಿಕಲ್ಲು ಮಳೆ, ಪ್ರವಾಹ, ಸಿಡಿಲಿನಿಂದ ಉಂಟಾಗುವ ಬೆಂಕಿ ಅವಘಡ ಇತ್ಯಾದಿ ಕಾರಣಗಳಿಂದ ಸಂಭವಿಸಬಹುದಾದ ಬೆಳೆಹಾನಿಯ ನಷ್ಟದ ಪರಿಹಾರವನ್ನು ಬೆಳೆ ವಿಮೆ ಘಟಕ(ಗ್ರಾಮಪಂಚಾಯಿತಿ)ವಾರು ನಿರ್ಧರಿಸಿ ಬೆಳೆ ನಷ್ಟದ ಪರಿಹಾರವನ್ನು ನೀಡುವುದರ ಮೂಲಕ ರೈತರಿಗೆ ನೆರವಾಗುವುದು ಮರುವಿನ್ಯಾಸಗೊಳಿಸಿದ ಹವಾಮಾನಾಧಾರಿತ ಬೆಳೆವಿಮೆ ಯೋಜನೆ (R-WBCIS) ಮುಖ್ಯ ಉದ್ದೇಶವಾಗಿದೆ.

ವಿಮಾ ಯೋಜನೆಯಡಿ ಒಳಪಡುವ ಬೆಳೆಗಳು ಹಸಿ ಮೆಣಸಿನಕಾಯಿ ಮತ್ತು ದಾಳಿಂಬೆ ಬೆಳೆಗಳಾಗಿವೆ.

**ಹಸಿ ಮೆಣಸಿನಕಾಯಿ:** ಬಳ್ಳಾರಿ, ಕಂಪ್ಲಿ, ಕುರುಗೋಡು, ಸಿರುಗುಪ್ಪ, ಸಂಡೂರು ತಾಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿಗಳು ವಿಮೆಗೆ ಒಳಪಡುವ ಪ್ರದೇಶಗಳಾಗಿದ್ದು, ಪ್ರತಿ ಹೆಕ್ಟರ್‌ಗೆ ವಿಮಾ ಮೊತ್ತ ರೂ.71 ಸಾವಿರ ಹಾಗೂ ರೈತರು ಪಾವತಿಸಬೇಕಾದ ವಿಮಾ ಕಂತಿನ ದರ ರೂ.3550 ಆಗಿರುತ್ತದೆ.

**ದಾಳಿಂಬೆ:** ಬಳ್ಳಾರಿ, ಕಂಪ್ಲಿ, ಕುರುಗೋಡು, ಸಿರುಗುಪ್ಪ, ಸಂಡೂರು ತಾಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿಗಳು ವಿಮೆಗೆ ಒಳಪಡುವ ಪ್ರದೇಶಗಳಾಗಿದ್ದು, ಪ್ರತಿ ಹೆಕ್ಟರ್‌ಗೆ ವಿಮಾ ಮೊತ್ತ 1 ಲಕ್ಷ 27 ಸಾವಿರ ಹಾಗೂ ರೈತರು ಪಾವತಿಸಬೇಕಾದ ವಿಮಾ ಕಂತಿನ ದರ ರೂ.6350 ಆಗಿರುತ್ತದೆ.

ರೈತರು ಅಗತ್ಯ ದಾಖಲೆಗಳೊಂದಿಗೆ ಎರಡು ಬೆಳೆಗಳ ವಿಮೆಗೆ ನೊಂದಾಯಿಸಿಕೊಳ್ಳಲು ಜುಲೈ 31 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಮತ್ತು ಕುರುಗೋಡು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ(ಜಿಪಂ) ದೂ: 08392-278177ಹಾಗೂಮೊ.9481305830, ಸಂಡೂರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ(ಜಿಪಂ) ದೂ:08395-260389 ಹಾಗೂ ಮೊ.9740934208, ಕಂಪ್ಲಿ ಮತ್ತು ಸಿರುಗುಪ್ಪದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ಜಿಪಂ) ದೂ:08396-222066 ಹಾಗೂ ಮೊ.9916794371 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯ ಕಾರ್ಯಕ್ರಮವನ್ನು ಜುಲೈ 02 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣದಲ್ಲಿ ಏರ್ಪಡಿಸಲಾಗಿದೆ.

ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರು ಉದ್ಘಾಟನೆ ಮಾಡುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶಾಸಕ ಜೆ.ಎನ್.ಗಣೇಶ್, ಸಂಸದರಾದ ಈ.ತುಕಾರಾಂ, ಕೆ. ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಸೇರಿದಂತೆ ಇತರರು ಭಾಗವಹಿಸುವರು.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**30–06–2024 – ಭಾನುವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೇವತಿ |
| ಯೋಗ | : ಅತಿಗಂಡ |
| ಕರಣ | : ಗರಜ |
| ಸೂರ್ಯೋದಯ | : 05:45:48 |
| ಸೂರ್ಯಾಸ್ತ | : 19:15:34 |
| ರಾಹು | : 17:34–19:16 |
| ಯಮಘಂಡ | : 12:31–14:12 |
| ಗುಳಿಕ | : 15:53–17:34 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 29–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.56 ಅಡಿ |
| ಒಳ ಹರಿವು | 1819 ಕ್ಯುಸೆಕ್ |
| ಹೊರ ಹರಿವು | 297 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.278 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.80 ಅಡಿ |
| ಒಳ ಹರಿವು | 188 ಕ್ಯುಸೆಕ್ |
| ಹೊರ ಹರಿವು | 2678 ಕ್ಯುಸೆಕ್ |
| ಸಾಮರ್ಥ್ಯ | 3.493 ಟಿಎಂಸಿ |

# ಜಾನಪದ ಸಾಹಿತ್ಯದ ನಾಡಿಮಿಡಿತ ಸಾಹಿತಿ ಮೊಗಳ್ಳಿ ಗಣೇಶ್‌ಗೆ ಬೀಳ್ಕೊಡುಗೆ

## ಇವರ ಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವದ ಪ್ರಮುಖ ಭಾಷೆಗಳಿಗೆ ಭಾಷಾಂತರವಾಗಿವೆ ಎಂದ ಕುಲಸಚಿವ ಡಾ.ವಿಜಯ್ ಪೂ.ತಂಬಂಡ



> ಡಾ. ಚಂದ್ರಶೇಖರ ಕಂಬಾರರು ನನ್ನನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಬರಮಾಡಿಕೊಂಡವರು, ಅವರಿಗೆ ನಾನು ಚಿರಋಣಿಯಾಗಿರುವೆ. ಕಂಬಾರರು ನನಗೆ ವರ್ಷಕ್ಕೆ ಎರಡು ಕೃತಿಗಳನ್ನು ರಚಿಸಬೇಕೆಂದು ಆದೇಶಿಸಿದ್ದರು. ಆ ಕಾರ್ಯವನ್ನು ಸ್ವಲ್ಪ ಮಟ್ಟಿಗೆ ಮಾಡುವ ಪ್ರಯತ್ನವನ್ನು ಮಾಡಿರುವೆ.
>
> – ಡಾ. ಮೊಗಳ್ಳಿ ಗಣೇಶ್
> ಜಾನಪದ ಸಾಹಿತಿ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಕಥಾ ಪರಂಪರೆಗೆ ಹೊಸತನ ನೀಡಿ, ಜಾನಪದ ಸಾಹಿತ್ಯ, ಕೃತಿ ಬರವಣಿಗೆ, ಸಂಶೋಧನೆ, ವಿಮರ್ಶೆ, ಮುಂತಾದ ಬರವಣಿಗೆಯ ಮೂಲಕ ಕನ್ನಡ ವಿಶ್ವವಿದ್ಯಾಲಯಕ್ಕೆ ಅಪಾರ ಹೆಸರು ತಂದುಕೊಟ್ಟ ಕೀರ್ತಿ ಡಾ. ಮೊಗಳ್ಳಿ ಗಣೇಶ್ ಸಲ್ಲುತ್ತದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕ್ರಿಯಾಶಕ್ತಿಯ ಸಿಂಡಿಕೇಟ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ ಡಾ.ಮೊಗಳ್ಳಿ ಗಣೇಶ್ ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು. ಜನಪದ ಸಾಹಿತ್ಯದ ಮೂಲಕ ಮಂಟೇಸ್ವಾಮಿ ಹಾಗೂ ಮಲೆಮಹದೇಶ್ವರ ಸ್ವಾಮಿಯ ಕುರಿತು ಅನೇಕ ಲೇಖನಗಳಿಂದ ನಾಡಿಗೆ ಪರಿಚಯವಾದವರು. ಇವರ ಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವದ ಪ್ರಮುಖ ಭಾಷೆಗಳಿಗೆ ಭಾಷಾಂತರವಾಗಿರುವುದು ಕನ್ನಡ ವಿಶ್ವವಿದ್ಯಾಲಯದ ಹೆಮ್ಮೆಯಾಗಿದೆ. ಇವರು ಸಾಹಿತ್ಯ ಲೋಕದಲ್ಲಿ ಕಟು ವಿಮರ್ಶೆಗೆ ಹೆಸರಾಂತರು. ಇಂದು ಇವರು ವೃತ್ತಿಯಿಂದ ನಿವೃತ್ತರಾಗುತ್ತಿರುವುದು ನಮಗೆಲ್ಲ ಬೇಸರದ ಸಂಗತಿ. ಇವರ ಮುಂದಿನ ನಿವೃತ್ತಿ ಜೀವನ ಆರೋಗ್ಯವಾಗಿರಲೆಂದು ಆಶಿಸುವೆ ಎಂದು ನುಡಿದರು.

ಕನ್ನಡ ವಿಶ್ವವಿದ್ಯಾಲಯದ ಉಪಕುಲಸಚಿವ ಡಾ.ಎ. ವೆಂಕಟೇಶ್ ಮಾತನಾಡಿ, ಡಾ. ಮೊಗಳ್ಳಿ ಗಣೇಶ್ ಅವರು ಕಾರ್ಯಕ್ರಮಗಳಿಂದ ದೂರ ಉಳಿದವರು. ದಲಿತ ಸಮೂಹಕ್ಕೆ ಇವರ ಬರವಣಿಗೆಗಳು ಪ್ರೇರಕ ಶಕ್ತಿಯಾಗಿ ನಿಂತಿವೆ. ಇವರು ವೃತ್ತಿಯಿಂದ ನಿವೃತ್ತರಾದರು ಪ್ರವೃತ್ತಿಯಿಂದ ಸಾಹಿತಿಗಳೇ. ಇವರ ನಿವೃತ್ತಿಯ ನಂತರ ಇವರ ಸ್ಥಾನವು ನಿರ್ವಾತಭಾವವನ್ನು ಸೂಚಿಸುತ್ತಿದೆ. ಇವರ ಮುಂದಿನ ಜೀವನವೂ ಸುಖಕರವಾಗಿರಲಿ ಎಂದರು.

ಡಾ. ಮೊಗಳ್ಳಿ ಗಣೇಶ್ ಗೌರವ ಸ್ವೀಕರಿಸಿ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಸಂಶೋಧನೆ ಲೋಕದಲ್ಲಿ ಮಾಡಿದ ಸಾಧನೆ ವಿಶ್ವದ ಪ್ರಮುಖ ಭಾಷೆಗಳಿಗೆ ಭಾಷಾಂತರಿಸಿದರೆ ಕನ್ನಡ ವಿಶ್ವ ವಿದ್ಯಾಲಯಕ್ಕೆ ವಿಶ್ವದ ಯಾವುದೇ ವಿಶ್ವವಿದ್ಯಾಲಯವು ಸರಿಸಾಟಿಯಿಲ್ಲ. ಕನ್ನಡ ವಿಶ್ವವಿದ್ಯಾಲಯ ನನಗೆ ತುಂಬಾ ಕೊಟ್ಟಿದೆ ಇಲ್ಲಿನ ವಿದ್ಯಾರ್ಥಿಗಳು ನನ್ನ ಕುಟುಂಬದ ಸದಸ್ಯರೇ ಎಂದು ಭಾವಿಸಿರುವೆ. ಹಾಗೆಯೇ ಸಹೋದ್ಯೋಗಿಗಳು ಸಿಬ್ಬಂದಿಗಳು ಪ್ರೀತಿಯಿಂದ ನಡೆದುಕೊಂಡಿದ್ದಾರೆ ಎಂದರು.

ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಆಡಳಿತ ಸಿಬ್ಬಂದಿಗಳು ಹಾಗೂ ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.

# ಗ್ರಂಥಾಲಯ ವಿಜ್ಞಾನ ತರಬೇತಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಡಿಯಲ್ಲಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಬೆಂಗಳೂರು, ಮೈಸೂರು ವಿಭಾಗದ ಮಂಗಳೂರು, ಬೆಳಗಾವಿ ವಿಭಾಗದ ಧಾರವಾಡ ಮತ್ತು ಕಲಬುರಗಿ ವಿಭಾಗಗಳಲ್ಲಿ ಆರು ತಿಂಗಳ ಅವಧಿಯ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲೆಗಳನ್ನು ನಡೆಸಲಾಗುತ್ತಿದ್ದು, ತರಬೇತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿ.ಯು.ಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ.40 ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೇ.35ರಷ್ಟು ಅಂಕ ಪಡೆದ ಅಭ್ಯರ್ಥಿಗಳು ಈ ತರಬೇತಿಗೆ ಅರ್ಹರಾಗಿರುತ್ತಾರೆ. ಹಾಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆ “ಡಿ” ದರ್ಜೆಯ ಗ್ರಂಥಾಲಯ ಸಹವರ್ತಿಗಳು ಸಂಬಂಧಪಟ್ಟ ಉಪನಿರ್ದೇಶಕರು/ ಮುಖ್ಯ ಗ್ರಂಥಾಲಯಾಧಿಕಾರಿಗಳ ಮುಖಾಂತರ, ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಹಾಗೂ ಇತರೆ ಸಂಸ್ಥೆಯ ಮುಖ್ಯಸ್ಥರ ಮುಖಾಂತರ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯ ಜೊತೆಗೆ ಪಿ.ಯು.ಸಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಸೇವೆಗೆ ಸೇರಿದ ದಿನಾಂಕ, ವೇತನ ಪ್ರಮಾಣ ಪತ್ರ, ನಡವಳಿಕೆ ಪ್ರಮಾಣ ಪತ್ರಗಳು ನಕಲು ಪ್ರತಿಗಳನ್ನು ಲಗತ್ತಿಸಬೇಕು. ಸಾಮಾನ್ಯ ಅಭ್ಯರ್ಥಿಗಳು ಪಿ.ಯು.ಸಿ ಅಂಕಪಟ್ಟಿ, ಜಾತಿ, ಕನ್ನಡ ಮಾಧ್ಯಮ, ಗ್ರಾಮೀಣ, ಮಹಿಳೆ, ಮಾಜಿ ಸೈನಿಕ, 371 ಜೆ ಪ್ರಮಾಣ ಪತ್ರಗಳ ದೃಢೀಕೃತ ನಕಲು ಪ್ರತಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಜುಲೈ 19 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಕಬ್ಬನ್ ಉದ್ಯಾನವನದ ರಾಜ್ಯ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿ, ಬೆಂಗಳೂರು–560001 ಅಥವಾ ದೂ.08022–212128, ಧಾರವಾಡ ಡಿಸಿ ಕಚೇರಿ ಆವರಣದ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿ ಧಾರವಾಡ–580001 ಅಥವಾ ದೂ.0836–1442465, ಮಂಗಳೂರಿನ ಬಾವುಟಗಡ್ಡೆಯ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿ ಅಥವಾ ದೂ.0824–2425873, ಕಲಬುರಗಿಯ ಜಗತ್ ವೃತ್ತದ ಸೂಪರ್ ಮಾರ್ಕೆಟ್‌ನ ಎಂ.ವಿ.ಎಚ್.ಶಾಲೆ ಆವರಣದ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿ ಅಥವಾ ದೂ.08472–221543 ಗೆ ಸಂಪರ್ಕಿಸಬಹುದು.

ಮೇಲ್ಕಂಡ ವಿಳಾಸಗಳಲ್ಲಿ ನಿಮಗೆ ಸಂಬಂಧಪಟ್ಟ ಆಯಾ ಕಂದಾಯ ವಿಭಾಗಗಳಿಂದ ಅರ್ಜಿ ಪಡೆದು ಸಲ್ಲಿಸಬಹುದು ಎಂದು ಬಳ್ಳಾರಿ ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ (ಪಿಯುಸಿ ಮತ್ತು ಪಿಯುಸಿ ಸಮನಾಂತರ ಕೋರ್ಸಿನ ವಿದ್ಯಾರ್ಥಿಗಳು) ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನವಾಗಿದ್ದು, ಪ್ರವರ್ಗ–1, ಎಸ್.ಸಿ. & ಎಸ್.ಟಿ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ರೂ. 1.00 ಲಕ್ಷದೊಳಗಿರಬೇಕು.

ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಅರ್ಜಿ ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ–ಮೇಲ್ bcwdhelpline@gmail.com ಮುಖಾಂತರ ಅಥವಾ ಜಿಲ್ಲಾ/ ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು. ಸಹಾಯವಾಣಿ ಸಂಖ್ಯೆ 8050770004 & 8050770005 ಆಗಿರುತ್ತದೆ ಎಂದು ಕೊಪ್ಪಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾಂತ್ರಿಕ ಲೋಪದೋಷ ಕಂಡಲ್ಲಿ ಸರಿಪಡಿಸಿ: ಎಡಿಸಿ ಎನ್.ಝುಬೇರ್

## ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಸಮಿತಿಯ ಅಧ್ಯಕ್ಷ, ಸದಸ್ಯರ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾಗಿರುವ ಐದು ಗ್ಯಾರಂಟಿ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಕಂಡುಬಂದಲ್ಲಿ ಕೂಡಲೇ ಸರಿಪಡಿಸುವ ಕೆಲಸವನ್ನು ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಎನ್. ಝುಬೇರ್ ಅವರು ಸೂಚಿಸಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ ಯೋಜನೆ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ ಹಾಗೂ ಯುವನಿಧಿ ಯೋಜನೆಗಳನ್ನು ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಸಮಿತಿ ರಚಿಸಿದ್ದು, ಲೋಪದೋಷ ಹಾಗೂ ವಿಳಂಬ ಕಂಡುಬಂದಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಗಮನಕ್ಕೆ ತರಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಸರ್ಕಾರ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಿಂದ ಜಿಲ್ಲೆಯ ಸಹಸ್ರಾರು ಕುಟುಂಬಗಳು ಏಳಿಗೆ ಕಾಣುತ್ತಿವೆ. ಅನುಷ್ಠಾನ ಸಮಿತಿಯ ಕಾರ್ಯಕರ್ತರು ಪ್ರತಿಯೊಬ್ಬರ ಮನೆ ಬಾಗಿಲಿಗೆ ತೆರಳಿ ಯೋಜನೆ ತಲುಪಿದ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು. ತಾಂತ್ರಿಕ ಸಮಸ್ಯೆ ಯಿಂದ ಯೋಜನೆಯ ಸದುಪಯೋಗ ಪಡೆಯದ ಜನರ ಅಗತ್ಯ ದಾಖಲೆಗಳನ್ನು ಪಡೆದುಕೊಂಡು ಯೋಜನೆ ಫಲಾನುಭವಿಗಳಿಗೆ ಮುಟ್ಟುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.



ಗ್ಯಾರಂಟಿ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಅಹವಾಲು ಅಥವಾ ಮಾಹಿತಿ ಬೇಕಾದಲ್ಲಿ ಅಲೆದಾಡಿಸದೇ ಸೂಕ್ತ ಪರಿಹಾರವನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಒದಗಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಅವರು, ಗೃಹಲಕ್ಷ್ಮೀ ಯೋಜನೆ ಬಗ್ಗೆ ಮಾಹಿತಿ ನೀಡುತ್ತಾ, ಜಿಲ್ಲೆಯಲ್ಲಿ ಒಟ್ಟು 3,11,180 ಪಡಿತರ ಚೀಟಿಗಳು ಇದ್ದು, ಅದರಲ್ಲಿ ಅಂತ್ಯೋದಯ, ಎಪಿಎಲ್, ಬಿಪಿಎಲ್ ಕಾರ್ಡ್ ಫಲಾನುಭವಿಗಳು ಸೇರಿ 2,81,987 ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಪ್ರತಿ ಮಾಹೆ ಗೃಹಲಕ್ಷ್ಮೀ ಯೋಜನೆಗೆ ಒಟ್ಟು ರೂ.55 ಕೋಟಿ ಜಮೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇಲ್ಲಿಯವರೆಗೂ ಗೃಹಲಕ್ಷ್ಮೀ ಹಣ ಜಮಾ ಆಗದೇ ಇದ್ದವರು ಎನ್‌ಪಿಸಿಐ ಸಕ್ರಿಯವಾಗಿದೆಯೇ ಎಂಬುದನ್ನು ಸಾರ್ವಜನಿಕರು ಪರಿಶೀಲಿಸಿಕೊಳ್ಳಬೇಕು. ಒಮ್ಮೆ ಬ್ಯಾಂಕ್ ಮತ್ತು ಆಧಾರ್ ಜೋಡಣೆಗೆ ಇ–ಕೆವೈಸಿ ಮಾಡಿಸಿದಲ್ಲಿ ಪದೇ ಪದೇ ಮಾಡಿಸುವ ಅಗತ್ಯವಿರುವುದಿಲ್ಲ ಎಂದರು. ಯಾವುದೇ ಕಾರಣಕ್ಕೂ ಗೃಹಲಕ್ಷ್ಮೀ ಯೋಜನೆಯನ್ನು ಸ್ಥಗಿತಗೊಳಿಸಲಾಗುವುದಿಲ್ಲ ಎಂದು ಈಗಾಗಲೆ ಸರ್ಕಾರವು ಖಚಿತ ಪಡಿಸಿದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಇನ್ನುಳಿದ ಗ್ಯಾಂರಟಿ ಯೋಜನೆಗಳಾದ ಶಕ್ತಿ ಯೋಜನೆ, ಗೃಹ ಜ್ಯೋತಿ, ಅನ್ನ ಭಾಗ್ಯ ಹಾಗೂ ಯುವನಿಧಿ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ವಿವರಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ಗ್ಯಾರಂಟಿ ಯೋಜನೆ ಸಂಬಂಧಿಸಿದ ಜಿಲ್ಲಾ ಮಟ್ಟದ ಪದಾಧಿಕಾರಿಗಳು ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿಯ ತಾಲ್ಲೂಕು ಮಟ್ಟದ ಅಧ್ಯಕ್ಷರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಜುಲೈನಿಂದ ಗ್ರಾಮ ಪಂಚಾಯಿತಿಯಲ್ಲಿಯೇ ಜನನ, ಮರಣ ನೋಂದಣಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿಯೇ ಜುಲೈ ಮಾಹೆಯಿಂದ ಜನನ ಮತ್ತು ಮರಣ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಅವರು ನೋಂದಣಿ ಮಾಡುತ್ತಾರೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಉಪ ನೋಂದಣಾಧಿಕಾರಿಗಳನ್ನಾಗಿ ನೇಮಿಸಿರುವುದರ ಬದಲಾಗಿ “ಗ್ರಾಮ ಪಂಚಾಯತಿ ಕಾರ್ಯದರ್ಶಿ (Grama Panchyath Secretary) ಇವರನ್ನು ಉಪನೋಂದಣಾಧಿಕಾರಿಯನ್ನಾಗಿ ನೇಮಿಸಿ ತಿದ್ದುಪಡಿ ಗೊಳಿಸಿಲಾಗಿದೆ. ಜನನ, ಮರಣ ಘಟನೆಗಳು ಘಟಿಸಿದ 30 ದಿನಗಳವರೆಗಿನ ಘಟನೆಗಳನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧ ಪಟ್ಟ ಗ್ರಾಮ ಪಂಚಾಯತಿ ಕಾರ್ಯದರ್ಶಿ (Grama Panchyath Secretary) ಇವರನ್ನು ಸಂಪರ್ಕಿಸಬಹುದು.

# ಕಾರ್ಮಿಕ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ

ಮೊದಲ ಪುಟದಿಂದ

ಕರ್ನಾಟಕ ಕಾರ್ಮಿಕ ಕಲ್ಯಾಣಮಂಡಳಿ (ಕಕಾಕಮಂ)ಯ ಯೋಜನೆಗಳು: ಈ ಮಂಡಳಿಯಡಿ ಶಿಕ್ಷಣಸಂಸ್ಥೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳು ದುಡಿಯುವ ಕಾರ್ಮಿಕರು ಅನ್ವಯಿಸುತ್ತಾರೆ. ಅಂತಹ ಕಾರ್ಮಿಕರಿಗೆ ವೈದ್ಯಕೀಯ ಸಹಾಯಧನ ಹಾಗೂ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ಸೌಲಭ್ಯವಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ (ಕಕಇನಿಕಾಕಮಂ): ಈ ಮಂಡಳಿಯಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಾತ್ರ ನೋಂದಣಿ ಮಾಡಿಕೊಳ್ಳಬಹುದಾಗಿದೆ ಹಾಗೂ ಕಾಲ ಕಾಲಕ್ಕೆ ವಿವಿಧ ಯೋಜನೆಗಳ ಸೌಲಭ್ಯ ಪಡೆಯಬಹುದಾಗಿದ್ದು, ಶೈಕ್ಷಣಿಕ ಧನಸಹಾಯ, ಅಪಘಾತಪರಿಹಾರ, ಪ್ರಮುಖ ವೈದ್ಯಕೀಯ ಸಹಾಯಧನ, ತಾಯಿ–ಮಗು ಸಹಾಯಹಸ್ತಾ, ದುರ್ಬಲತೆ ಪಿಂಚಣಿ ಹಾಗೂ ವಯೋವೃದ್ಧ ಪಿಂಚಣಿ, ಹೆರಿಗೆ ಸೌಲಭ್ಯ, ಅಂತ್ಯಕ್ರಿಯೆ ವೆಚ್ಚ, ಮದುವೆ ಸಹಾಯಧನ, ವೈದ್ಯಕೀಯ ಸಹಾಯಧನ ಸೌಲಭ್ಯಗಳು ಸಿಗಲಿವೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ (ಕರಾಅಕಾಸಾಭಮಂ): ಈ ಮಂಡಳಿಯಡಿ 46 ವಲಯಗಳ ಅಸಂಘಟಿತ ಕಾರ್ಮಿಕರು ಇ–ಶ್ರಮ ಯೋಜನೆಯಡಿ ನೋಂದಾಯಿಸಿಕೊಳ್ಳಬಹುದಾಗಿದೆ. ಇದರಡಿ 11 ಅಸಂಘಟಿತ ವಲಯದ ಕಾರ್ಮಿಕರಿಗೆ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಅನ್ವಯಿಸುತ್ತದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಎಸ್.ಸಿ & ಎಸ್.ಟಿ ಕಾರ್ಮಿಕರಿಗೆ ಆಶಾದೀಪ ಯೋಜನೆ ಅನ್ವಯ. ಅಸಂಘಟಿತ ವಲಯದಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿರುವ ಚಾಲಕರಿಗೆ ಅಪಘಾತ ಪರಿಹಾರ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಪ್ರಯೋಜನ ಯೋಜನೆ ಸಿಗಲಿದೆ. ಇದಲ್ಲದೇ ವ್ಯಾಪಾರಿಗಳು ಮತ್ತು ಸ್ವಯಂ ಉದ್ಯೋಗಿಗಳಿಗೆ ಹೊಸ ಪಿಂಚಣಿಯು ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್–ಧನ್(ಪಿ.ಎಂ.ಎಸ್.ವೈ.ಎಂ) ಯೋಜನೆಯಲ್ಲಿ ದೊರೆಯಲಿದೆ.

ಈ ಎಲ್ಲಾ ಯೋಜನೆಗಳಡಿ ಅರ್ಹ ಕಾರ್ಮಿಕರು ನೋಂದಾಯಿಸಿಕೊಂಡು ಹಾಗೂ ಕಾಲ ಕಾಲಕ್ಕೆ ವೆಬ್‌ಸೈಟ್ http://kbocwwb.karnataka.gov.in ನಲ್ಲಿ ಅರ್ಜಿ ಸಲ್ಲಿಸಿ, ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಚೇರಿ, ಜಿಲ್ಲಾಡಳಿತ ಭವನ ಕೊಪ್ಪಳ. ಕಾರ್ಮಿಕ ನಿರೀಕ್ಷಕರ ಕಛೇರಿ ಕೊಪ್ಪಳ ವೃತ್ತ ಕೊಪ್ಪಳ, ಕಾರ್ಮಿಕ ನಿರೀಕ್ಷಕರುಗಳ ಕಚೇರಿ ಕುಷ್ಟಗಿ, & ಗಂಗಾವತಿಗೆ ಭೇಟಿ ನೀಡಿ ತಿಳಿದುಕೊಳ್ಳಬಹುದಾಗಿರುತ್ತದೆ ಎಂದು ಕಾರ್ಮಿಕ ಇಲಾಖೆ ಪ್ರಕಟಣೆ ತಿಳಿಸಿದೆ.

# ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿಕೊಳ್ಳಿ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ । ವಿವಿಧ ಇಲಾಖೆಗಳಡಿಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ವಿವಿಧ ಇಲಾಖೆಗಳಡಿಯ ಕಾರ್ಯಕ್ರಮಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ 2024–25ನೇ ಸಾಲಿಗೆ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಅನುಸೂಚಿತ ಬುಡಕಟ್ಟು ಉಪಯೋಜನೆಯ ವಿವಿಧ ಇಲಾಖೆಗಳಡಿಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಉಪಯೋಗಿಸುತ್ತಿದ್ದು, ಪ್ರಗತಿಯಲ್ಲಿ ಹಿನ್ನಡೆಯಾಗಬಾರದು ಮತ್ತು ಉದ್ದೇಶಿತ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.



ಜಿಲ್ಲೆಯ ಒಟ್ಟು ಎಸ್‌ಸಿಎಸ್‌ಪಿ ಅನುದಾನ ರೂ.3977.90ಲಕ್ಷ ಅನುದಾನ ಬಿಡುಗಡೆಯಾಗಿದೆ. ಟಿಎಸ್‌ಪಿ ರೂ.5609.28 ಲಕ್ಷ ಅನುದಾನ ಬಿಡುಗಡೆಯಾಗಿದೆ. ಅನುದಾನವನ್ನು ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಡಬೇಕು. ಯಾವುದೇ ರೀತಿಯಲ್ಲಿ ಹಣ ಪೋಲಾಗುವಂತಿಲ್ಲ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆಗಳಡಿಯ ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮ ಮತ್ತು ಗುಣಮಟ್ಟದ ಬಗ್ಗೆ ಸಾಮಾಜಿಕ ಪರಿಶೋಧನೆ ಮತ್ತು ಮೌಲ್ಯಮಾಪನವನ್ನು ಮಾಡಿಸಲಾಗುತ್ತದೆ ಎಂದು ಅವರು ತಿಳಿಸಿದರು. ಕೆಲ ಕಾಮಗಾರಿಗಳು ಹಾಗೂ ಪೂರ್ಣಗೊಳ್ಳದೇ ಇರುವ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಜಿಲ್ಲಾಧಿಕಾರಿಗಳು, ತಮಗೆ ನೀಡಿದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಬೇಕು ಮತ್ತು ಗುಣಮಟ್ಟದಿಂದ ಕೂಡಿರಬೇಕು. ತಪ್ಪಿದಲ್ಲಿ ಅಧಿಕಾರಿಗಳೇ ಹೊಣೆ ಹೊರಬೇಕಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಕೌಶಲ್ಯ ಅಭಿವೃದ್ಧಿ ಇಲಾಖೆಗಳ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನ ಬಗ್ಗೆ ಮಾಹಿತಿ ಪಡೆದುಕೊಂಡರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA